ಕೊಡಗು ಸಂಗಾತಿ


ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K·R·N·N· 240 ಸಂಪುಟ : 1 ಸಂಚಿಕೆ : 10 ಆಗಸ್ಟ್ 15 ರಿಂದ 30, 1997 ಪುಟಗಳು : 24 ರೂ. 5.



ಅಂದು ವೈಭವಕ್ಕೆ ಹೆಸರಾದ ಮಡಿಕೇರಿ ಅರಮನೆ
ಇಂದು ಸರಕಾರಿ ಕಛೇರಿಗಳ ತವರು ಮನೆ



ಕೋಟೆಯ ಮಧ್ಯೆ ಆಮೆ ಮಲಗಿದೆ
ಅಲ್ಲಿದೆ ಸುರಂಗ ಎನ್ನುವ ಮಾತಿದೆ!

"ಕೊಡಗು ಸಂಗಾತಿ" ಓದುಗರಿಗೆ ಹಾಗೂ ಹಿತೈಷಿಗಳಿಗೆ ಕೈಲ್‌ಮುಹೂರ್ತ ಹಬ್ಬದ ಹಾರ್ದಿಕ ಶುಭಾಶಯಗಳು

With Best Woshes to Kodagu Sangathi

From :

Cheriyamane Family

Smt/Shri Cheriyamane Ullas

Rtd. Veterinary dept.

Smt/Sri Dr. C. U. Jayaram

B.Sc , M B B S

(Ex. Lt. Surgeon Indian Navy)

INDIRA CLINIC & INDIRA POLYCLINIC

Kuvempunagar, Mysore-23

Baby Sunidhi Cheriyamane	Power Mouse
Mr. Diwakar Cheriyamane B.Sc	Computer Supports (Partner)
Miss. Dhanu Cheriyamane B Sc. M.A.	Indira Computers
Mr. Manoj Kumar Cheriyamane B.Com.	Mysore Land Marks
Mr. Nandakumar Cheriyamane B Sc	Malbar Yellow Pages Kerala (Partner)

Smt/Shri Pandana Sharada Nagesh & family, Kodagu.

Smt/Shri Damayanthi Ganesh & family, Kodagu.

No. 1838, 'K' Block Ist Stage Kuvempunagar, Mysore-2

WITH BEST WISHES to KODAGU SANGATHI

From

SHRI ANNECHIRA FAMILY, BANGALORE

Shri Annechira Madappa

Supervisor HAL

Smt. Annechira Susheela

Water Works dept.

Mr. Annechira Shivakumar

BE Electronics

GENUINE COMPUTERS INC.

Mr. Annechira Girish

Dip. Telecom

No. 337 II th Cross, 24th Main, Near Oxford School,

J. P. Nagar, Bangalore.

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟಡ ಪಿ. ಶೀಲಾಮಣಿ

ಉಪ ಸಂಪಾದಕ :
ಕಟ್ರತನ ಸಿ. ಜಯರಾಂ

ಸಹ ಸಂಪಾದಕ :
ಹುಲಿಮನೆ ರಮೇಶ್

ವರದಿಗಾರ :
ಪಟ್ಟಡ ಎಲ್. ಶಿವಕುಮಾರ್

ಕಛೇರಿ ನಿರ್ವಹಣೆ :
ಪಟ್ಟಡ ಪಿ. ದೀಪಕ್
ಹೊಸೊಕ್ಲು ಹರಿಣಿ ಬೆಳ್ಯಪ್ಪ
ಮಜ್ಞಾಪುರ ಧರಣಿ ಗಣಪತಿ

ಮುದ್ರಣ :
ಮಜ್ಞಾಂಡ್ರ ಕೆ. ತಮ್ಮಯ್ಯ
ಆಶೀರ್ವಾದ್ ಪ್ರಿಂಟರ್ಸ್,
ವಿನಾಯಕನಗರ, ಮೈಸೂರು–12

ಗೌರವ ವ್ಯವಸ್ಥಾಪಕ :
ಪಟ್ಟಡ ಎಂ. ಪ್ರಭಾಕರ್

ಜಾಹೀರಾತು ಪ್ರಸಾರ ಕಛೇರಿ :
ಕೊಡಗು ಸಂಗಾತಿ
ನಂ. 322, ಬೋಗಾದಿ ಸರ್ಕಲ್
ಹಿನಕಲ್ ಪೋಸ್ಟ್, ಮೈಸೂರು–17
ದೂರವಾಣಿ : 0821–516771

ಒಳನೋಟ

ಅರೆ ಭಾಷೆರ ವಿಭಾಗ

ಚಂದಾ ವಿವರ

ಬಿಡಿ ಪ್ರತಿ	:	5 ರೂ.
ಅರ್ಧ ವಾರ್ಷಿಕ	:	60 ರೂ.
ವಾರ್ಷಿಕ ಚಂದಾ	:	120 ರೂ.

ಸಂಪಾದಕೀಯ :

ಮಹಿಳೆಯರಿಗೆ ಸಮಾಜದಲ್ಲಿ ಎಷ್ಟು ಸ್ಥಾನ ಮಾನಗಳಿವೆ ಎಂಬುದನ್ನು ನೋಡುತ್ತಾ ಹೋದರೆ ನಮಗೆ ಕಾಣಸಿಗುವುದು ಬೆರಳೆಣಿಕೆಯಷ್ಟು ಮಾತ್ರ. ಹೀಗೇಕೆ ? ವಿಚಾರ ಮಾಡಿದಾಗ, ಮಹಿಳೆಯರೆ ಮುಂದೆಬರುತ್ತಿಲ್ಲ ಹಾಗೂ ಅವರ ಹಕ್ಕುಗಳನ್ನು ಅವರೇ ಪಡೆಯುತ್ತಿಲ್ಲಾ ಎಂಬುದು ಮನವರಿಕೆಯಾಗುತ್ತದೆ.

ನಮ್ಮ ಹಿರಿಯರು, ಸಮಾಜ ಸುಧಾರಕರು, ಧುರೀಣರು, ಬರವಣಿಗೆಯಲ್ಲಿ, ಭಾಷಣಗಳಲ್ಲಿ ಮಹಿಳೆಯರಿಗೆ ಸ್ಥಾನಮಾನ, ಮೀಸಲು, ನೀಡಲಾಗಿದೆ ಎಂದು ಬೊಗಳೆ ಬಿಡುವುದು ಸರ್ವೇ ಸಾಮಾನ್ಯವಾಗಿ ಬಿಟ್ಟಿದೆ. ಆದರೆ ವಾಸ್ತವಾಂಶ ಹಾಗಿಲ್ಲ. ಮಹಿಳೆಯರು ಅವರ ಹಕ್ಕುಗಳನ್ನು ಕಿತ್ತುಕೊಳ್ಳಬೇಕಾಗಿದೆ. ಇಲ್ಲವಾದರೆ ಅವರ ಹಕ್ಕುಗಳು ಮಣ್ಣಲ್ಲಿ ಮಣ್ಣಾಗಿ ಸರ್ವನಾಶವಾಗಿ ಹೋಗುವುದರಲ್ಲಿ ಯಾವ ಸಂಶಯವಿಲ್ಲಾ.

ಈ ಮೇಲಿನ ಮಾತುಗಳನ್ನು ಇಲ್ಲಿ ಏಕೆ ಪ್ರಸ್ತಾಪಿಸಲಾಯಿತು ಎಂಬ ಭಾವನೆ ನಿಮ್ಮಲ್ಲಿ ಬರಬಹುದು ಅಲ್ಲವೇ. ಅದಕ್ಕೆ ಒಂದು ಕಾರಣವಿರಬೇಕಲ್ಲಾ, ಅದನ್ನು ನಿಮ್ಮ ಮುಂದಿಡಲು ಪ್ರಯತ್ನಿಸುತ್ತೇನೆ. ಮೈಸೂರಿನಲ್ಲಿರುವ ಗೌಡ ಸಮಾಜವು ದೊಡ್ಡದು, ಅಪಾರ ಜನ ಸಮೂಹವನ್ನು ಹೊಂದಿರುವ ಸಮಾಜ. ಆದರೆ ಇಲ್ಲಿ ಒಂದು ಮಹಿಳಾ ಸಮಾಜದ ಕೊರತೆ ಎದ್ದು ಕಾಣುತ್ತಿತ್ತು. ಅದನ್ನು ತುಂಬಲು "ಕೊಡಗು ಸಂಗಾತಿ" ಕೆಲವು ಮನಮುಟ್ಟುವ/ನಾಟುವ ಬರವಣಿಗೆಗಳನ್ನು ತಮ್ಮ ಮುಂದಿಟ್ಟಿತ್ತು. [ಉದಾ : ಬೆಂಗಳೂರಿನ ಕೊಡಗು ಮತ್ತು ದ. ಕನ್ನಡ ಗೌಡ ಸಮಾಜದ ಅಧ್ಯಕ್ಷರ ಸಂದರ್ಶನದಲ್ಲಿ ಮಹಿಳಾ ಸಮಾಜ ಬೇಕೇ ಬೇಕು ಎಂಬ ಪ್ರಸ್ತಾಪ ಮತ್ತು ಬೈತಡ್ಕ ಜೋಯಪ್ಪನವರ ಸಂದರ್ಶನದಲ್ಲಿ ಹೀಗೆ ಇನ್ನೂ ಹಲವು...] ಈ ಬರವಣಿಗೆ ಫಲವಾಗಿ ಏನೋ, ಇದೇ ತಿಂಗಳ ದಿನಾಂಕ **17-8-1997**ರ ಭಾನುವಾರ ಮೈಸೂರಿನಲ್ಲಿ ಕೊಡಗು ಗೌಡ ವಿದ್ಯಾರ್ಥಿ ನಿಲಯದಲ್ಲಿ ಒಂದು ಮಹಿಳಾ ಸಂಘಟನೆ ಅಸ್ತಿತ್ವಕ್ಕೆ ಬಂದಿದೆ ಎನ್ನುವುದು ಶ್ಲಾಘನೀಯ. ಇಲ್ಲಿ ಕು|| ಧನುಚೆರಿಯ ಮನೆ, ಕು|| ಗೀತಾ ಮೋಂಟಡ್ಕ ಪ್ರಮುಖ ಪಾತ್ರ ವಹಿಸಿರುವುದು ಸ್ಮರಣೀಯ ವಿಚಾರ. ಇದು ಗೌಡ ಜನಾಂಗದ ಶ್ರೇಯೋಭಿವೃದ್ಧಿ, ಸಂಘಟನೆ, ಐಕ್ಯತೆ, ಸರ್ವತೋಮುಖ ಏಳಿಗೆಗಾಗಿ ದುಡಿಯುವ ಏಕೈಕ ಪತ್ರಿಕೆಯಾದ "ಕೊಡಗು ಸಂಗಾತಿ" ಪಾಕ್ಷಿಕಕ್ಕೆ ಸಂದ ಮನದಾಳದ ಯಶಸ್ಸು ಎಂದರೆ ಅತಿಶಯೋಕ್ತಿಯಾಗಲಾರದು. ಹೀಗೆ ನೀರೆಯರು ಯಾವ ಅಡೆ ತಡೆ ವಿಘ್ನಗಳನ್ನು ಮೆಟ್ಟಿ, ಮುಂದೆ ಬಂದರೆ ಅವರಿಂದ ಸಮಾಜವು ಪ್ರಗತಿ ಪಥದಲ್ಲಿ ನಡೆಯುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಇದೊಂದೇ ಮಾತ್ರವಲ್ಲ ಇನ್ನು ಕೆಲವೆಡೆ ದೊಡ್ಡ ದೊಡ್ಡ ಸಮಾಜಗಳಿವೆ. ಆ ಸಮಾಜಗಳಡಿಯಲ್ಲಿ ಸಾಕಷ್ಟು ಮಹಿಳಾ ಸಂಘಟನೆಗಳು ಹುಟ್ಟಿಕೊಂಡಾಗ, ಒಂದು ಬಲಿಷ್ಠ ಸಮಾಜವಾಗಲು ಸಾಧ್ಯ ಎಂಬುದರಲ್ಲಿ ಯಾವ ಸಂಶಯವೇ ಇಲ್ಲ ! ಇಂತಹ ಸಮಾಜದ ನಿರ್ಮಾಣವೇ ಮತ್ತು ಪ್ರಗತಿಯೇ ಈ ದೇಶದ ಆಸ್ತಿಯು ಸಹ ಹೌದು. ●

ಸ್ನೇಹಿತರನ್ನು ಕಳೆದುಕೊಳ್ಳುವ ಲಕ್ಷಣಗಳು

ಈ ಕೆಳಗಿನ ಪ್ರಶ್ನೆಗಳನ್ನು ನಿಮ್ಮನ್ನು ನೀವೇ ಕೇಳಿಕೊಳ್ಳಿ :

ಮಾತನಾಡುವಾಗ ಅಥವಾ ಭಾಷಣ ಮಾಡುವಾಗ ನಿಮಗೆ ತಿಳಿದಿರುವ ವಿಷಯವನ್ನು ಕುರಿತು ಬೇಕಾದಷ್ಟು ಹೇಳುತ್ತೀರಾ?

ಯಾವುದೇ ಮಾತುಕತೆಯಲ್ಲಿ ನೀವು ಹೇಳಿದ್ದನ್ನೇ ಎಲ್ಲರೂ ಕೇಳಿಸಿಕೊಳ್ಳಬೇಕೆಂದು ಬಯಸುತ್ತೀರಾ ?

ಬೇರೆಯವರು ಮಾತಾಡುತ್ತಿರುವಾಗ ಮಧ್ಯೆ ಮಧ್ಯೆ ನೀವು ಬಾಯಿ ಹಾಕುತ್ತೀರಾ ?

ಮಾತನಾಡುತ್ತಿರುವವನು ತಪ್ಪು ಮಾಡುತ್ತಿದ್ದಾನೆ ಎಂದು ಅನ್ನಿಸಿದ ತಕ್ಷಣ, ಅದನ್ನು ಎಲ್ಲರೆದುರಿಗೆ ತೋರಿಸಿ ಆನಂದಿಸುತ್ತೀರಾ ?

ಅವಕಾಶ ಕಲ್ಪಿಸಿಕೊಂಡು ನಿಮ್ಮ ಬಗ್ಗೆ, ನಿಮ್ಮ ಸಂಸಾರದವರ ಬಗ್ಗೆ, ನಿಮ್ಮ ಸಾಧನೆಗಳ ಬಗ್ಗೆ, ನಿಮ್ಮ ಆಸಕ್ತಿಗಳ ಬಗ್ಗೆ ಮಾತನಾಡುತ್ತೀರಾ ?

ಊಹಾಪೋಹಗಳನ್ನು ಕಲ್ಪಿಸಿಕೊಳ್ಳುವ ಉತ್ಪ್ರೇಕ್ಷೆ ಮಾಡುವ ಅಭ್ಯಾಸ ನಿಮಗಿದೆಯೇ ?

ಚರ್ಚಾಸ್ಪದ ವಿಷಯಗಳ ಬಗ್ಗೆ ಇತರರು ಹೊಂದಿರುವ ವ್ಯಯಕ್ತಿಕ ಅಭಿಪ್ರಾಯಗಳ ಬಗ್ಗೆ ಗೌರವ ಹೊಂದಿಲ್ಲವೇ ?

ಈ ಏಳು ಪ್ರಶ್ನೆಗಳಿಗೆ ನಿಮ್ಮ ಉತ್ತರ 'ಹೌದು' ಎಂದಾದರೆ ಸ್ನೇಹಿತರನ್ನು ಕಳೆದುಕೊಳ್ಳುತ್ತೀರಿ 'ಇಲ್ಲ' ಎಂದಾದರೆ 'ಸ್ನೇಹ' ಬೆಳೆಯುತ್ತದೆ. [ಆಧಾರ]

ಕವಿತೆಗಳ ಹುನ್ನಾರ, ಕಥೆಗಾರ ಹೊದ್ದೆಟ್ಟಿ ಬಿ. ಭವಾನಿಶಂಕರ್

ವಾಗ್ಮಿ, ಕವಿ ಹೊದ್ದೆಟ್ಟಿ ಭವಾನಿಶಂಕರ್‌ರವರನ್ನು ನಿಮಗೆಲ್ಲರಿಗೂ ಪರಿಚಯಿಸಲು ಹರ್ಷವೆನಿಸಿದೆ. ಬೆಂಗಳೂರಿನ BEL ಕಾರ್ಖಾನೆ ಉದ್ಯೋಗಿಯಾಗಿದ್ದುಕೊಂಡು ನಿಂತಲ್ಲಿ, ಕೂತಲ್ಲಿ, ಎಲ್ಲೆಂದರಲ್ಲಿ ಕವಿತೆ ರಚಿಸುವ ಪರಿಜ್ಞಾನ ಮೆಚ್ಚುವಂತದ್ದೆ. ಇವರು ನಮ್ಮ ಜನಾಂಗದ ಮೊದಲ ಶ್ರೇಣಿಯ ಕವಿ. **ಸಂ.**

ಸಂದರ್ಶನ, ಲೇಖನ :
ಕಟ್ರತನ ಜಯರಾಂ



ಹೊದ್ದೆಟ್ಟಿ ಭವಾನಿಶಂಕರ್, ಪತ್ನಿ ಪಿ. ಎನ್. ಸುಗುಣ

ದಕ್ಷಿಣ ಕನ್ನಡ ಜಿಲ್ಲೆಯ ಪೆರಾಜೆ ಗ್ರಾಮದ ದಿ|| ಹೊದ್ದೆಟ್ಟಿ ಬೋಜಪ್ಪ, ಸೀತಮ್ಮ ದಂಪತಿಗಳ ಮೂರನೆ ಮಗನಾಗಿ 25–3–1944ರಲ್ಲಿ ಜನಿಸಿದ ಭವಾನಿ ಶಂಕರ್ ನಿಂತಲ್ಲಿ, ಕುಳಿತಲ್ಲಿ, ಕಂಡವರ ಮೇಲೆ ಕವಿತೆ ರಚನೆಯ ಬಳುವಳಿಯನ್ನು ಪಡೆದುಕೊಂಡು ಬಂದಿದ್ದಾರೆ.

ಇವರ ಕವಿತೆಗಳು ರಾಷ್ಟ್ರಮಟ್ಟದ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ಕಾಣಬಹುದು. ಇಂತಹ ಒಬ್ಬ ಬರಹಗಾರರನ್ನು 'ಸಂಗಾತಿ' ಮಾತನಾಡಿಸಿದಾಗ ಅವರ ಪರಿಚಯವನ್ನು ನಿಮ್ಮ ಮುಂದಿಡುತ್ತಿದ್ದೇವೆ.

ಸಂಗಾತಿ : ನಿಮ್ಮ ವಿದ್ಯಾಭ್ಯಾಸ ಎಲ್ಲೆಲ್ಲಿ ಮುಗಿಸಿದ್ದಿರಿ ?

ಉತ್ತರ : ನಾನು ಬಾಲ್ಯದ ವಿದ್ಯಾಭ್ಯಾಸವನ್ನು ಬೋರ್ಡ್ ಹೈಸ್ಕೂಲ್ ಸುಳ್ಯದಲ್ಲಿ 9ನೇ ತರಗತಿವರೆಗೆ. ನಂತರ S.S.L.C. ಸೈಂಟ್ ಮೈಕಲ್ ಸ್ಕೂಲ್ ಮಡಿಕೇರಿ. ಹಾಗೆ ಈ ದಿನಗಳಲ್ಲಿ ನನ್ನ ಪ್ರತಿಭೆಯನ್ನು ಗುರುತಿಸಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ಸ್ಕೂಲ್ ಕಡೆಯ ಒತ್ತಾಯ, ಅದರಂತೆ I. T. I. ಆಗಿನ Fitter trade ಮುಗಿಸಿದೆ. ಅನಂತರ ಮುಂದಿನ ದಿನಗಳಲ್ಲಿ ಕವಿತೆಗಳನ್ನು ರಚಿಸುವ ಬಯಕೆ ಅಂಟಿಕೊಂಡಿದ್ದರಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ M. A. ಮುಗಿಸಿದೆ.

ಸಂ : ನೀವು ವಿದ್ಯಾಭ್ಯಾಸ ಮುಗಿಸಿದ ನಂತರ ಯಾವ ಹುದ್ದೆಗೆ ಪಾದಾರ್ಪಣೆ ಮಾಡಿದ್ದೀರಿ ?

ಉ : 1965ರಲ್ಲಿ ಬೆಂಗಳೂರಿನ BEL ನಲ್ಲಿ ಉದ್ಯೋಗಿಯಾದೆ. ಇಲ್ಲಿ ಹಂತ ಹಂತವಾಗಿ ಮೇಲೇರಿ ಈಗ 30 ವರ್ಷಗಳ ನಂತರ Junior foreman ಆಗಿದ್ದೇನೆ.

ಸಂ : ಬೆಂಗಳೂರಿನಲ್ಲಿ ತುಂಬಾ ವರ್ಷಗಳಿಂದ ವಾಸವಾಗಿದ್ದೀರಿ ಎಂಬುದು ನಿಮ್ಮ ಮಾತಿನಿಂದ ತಿಳಿದು ಬಂತು. ಹೀಗಿರುವಾಗ ಸಮಾಜಕ್ಕಾಗಿ ಏನೇನು ಮಾಡಿದ್ದೀರಿ ?

ಉ : ಸುಮಾರು 30 ವರ್ಷದಿಂದ ವಾಸವಾಗಿದ್ದೇನೆ. ಹೀಗಿರುವಾಗ ನಾನು ಮತ್ತು ಈಗಿನ ನಮ್ಮ ಸಮಾಜದ ಹಾಲಿ ಅಧ್ಯಕ್ಷರು ಶ್ರೀ ಮೊಣ್ಣಪ್ಪನವರು ಸೇರಿ, ಬೆಂಗಳೂರಿನ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ ಸ್ಥಾಪನೆ ಮಾಡಿದೆವು. ಈ ಸಂದರ್ಭದಲ್ಲಿ ನಾವು ತುಂಬಾ ಶ್ರಮಪಡಬೇಕಾಯಿತು. ನಂತರ ನಮ್ಮದೇ ಆದ ಹೌಸಿಂಗ್ ಕೊ ಆಪರೇಟಿವ್ ಸೊಸೈಟಿ ಸ್ಥಾಪನೆ ಮಾಡಿದೆವು. ಈಗ ಅದರ ಸಕ್ರಿಯ ಸದಸ್ಯನಾಗಿ ದುಡಿಯುತ್ತಿದ್ದೇನೆ. ಅದಕ್ಕಾಗಿ ಜಕ್ಕೂರು, ಲಗ್ಗೇರಿ (ಬೆಂಗಳೂರು) ಗಳಲ್ಲಿ ಭೂಮಿ ತೆಗೆದು ಅದನ್ನು ಸೈಟನ್ನಾಗಿ ಪರಿವರ್ತಿಸಿ ಕೊಟ್ಟಿದ್ದೇವೆ. ಹೀಗೆ ಹಲವು ಸಮಾಜ ಸೇವೆಯಲ್ಲಿ ಪಾತ್ರವಹಿಸಿದ್ದೇನೆ.

ಸಂ : ನೀವೊಬ್ಬರು ಸಾಹಿತಿ ಎಂಬುದು ತಿಳಿಯಿತು. ಸಾಹಿತ್ಯ ಮಟ್ಟದಲ್ಲಿ ಏನನ್ನು ಸಾಧಿಸಿದ್ದೀರ ?

ಉ : ನಾನೊಬ್ಬ ಸಾಹಿತಿಯಾಗಬೇಕು, ಕವಿತೆಗಳನ್ನು ರಚಿಸಬೇಕು ಎಂಬುದು ಮೊದಲಿನಿಂದಲೂ (ಚಿಕ್ಕಂದಿನಿಂದಲೂ) ಮನದಾಳದಲ್ಲಿತ್ತು. ಅದಕ್ಕಾಗಿ ಸಾಹಿತ್ಯದಲ್ಲಿ M.A. ಯನ್ನು ಮಾಡಿದೆ. ನಂತರ ನಮ್ಮ ಕಾರ್ಖಾನೆಯಲ್ಲಿ ಪ್ರಸಾರವಾಗುತ್ತಿರುವ ಪತ್ರಿಕೆಗೆ ಕವಿತೆಗಳನ್ನು ಕೊಡುತ್ತಾ ಬಂದೆ. ಹಾಗೆ 'ಕನ್ನಡಪ್ರಭ' ಮತ್ತು 'ಪ್ರಜಾವಾಣಿ' ಹೀಗೆ ರಾಷ್ಟ್ರಮಟ್ಟದ ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ. ಈಗ

ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 1837ರ ಸ್ವಾತಂತ್ರ್ಯ ಸಂಗ್ರಾಮ

ಚಾರಿತ್ರಿಕ ಹಿನ್ನೆಲೆ : [ಕಳೆದ ಸಂಚಿಕೆಯಿಂದ]

ಕ್ರಿ. ಶ. 1600ರಲ್ಲಿ ಕೊಡಗಿನಿಂದ ದೂರದ ಶಿವಮೊಗ್ಗ ಜಿಲ್ಲೆಯ ಇಕ್ಕೇರಿ ವಂಶದ ರಾಜಕುಮಾರ ಜಂಗಮರ ವೇಷದಲ್ಲಿ ಬಂದು ರಾಜ್ಯ ಸ್ಥಾಪಿಸಿದ್ದು, ಕೊಡಗಿನ ಇತಿಹಾಸದಲ್ಲಿ ಬಹು ಮುಖ್ಯವಾದ ಘಟನೆಯಾಗಿದೆ. ಕಾರಣವೇನೆಂದರೆ ಗಂಗರ ಮತ್ತು ಚೋಳರ ರಾಜ್ಯಭಾರ ತಪ್ಪಿದ ನಂತರ ಇಡೀ ಕೊಡಗು ಪ್ರಾಂತ್ಯ ವನ್ನು ಆಳುವ ಒಬ್ಬನೇ ರಾಜನಿಲ್ಲದೆ ಸಣ್ಣ ಪುಟ್ಟ ಪಾಳೇಗಾರ ರಾದ, ನಾಯಕರಿಂದ ಕೆಲವು ಗ್ರಾಮಗಳನ್ನು ಒಬ್ಬೊಬ್ಬರು ವಶಪಡಿಸಿಕೊಂಡು ಅವರವರೊಳಗೆ ಆಗಾಗ್ಗೆ ಜಗಳಗಳಾಗುತ್ತಿದ್ದು ಎಲ್ಲಿಯೂ ಶಾಂತಿ ಇಲ್ಲದೆ ಜನರು ಕಂಗೆಟ್ಟಿದ್ದರು. ಆದುದರಿಂದ ವೀರ ರಾಜರಿಂದಾಗಿ ಕೊಡಗಿನಲ್ಲಿ ಶಾಂತಿ ನೆಲಸಿ, ಹಂಚಿ ಹೋಗಿದ್ದ ಕೊಡಗು ಒಂದು ರಾಜ್ಯವಾಗಿ ಮಾರ್ಪಟ್ಟಿತು.

ಹೈದರಾಲಿ ಮತ್ತು ಟಿಪ್ಪುಸುಲ್ತಾನರ ದಾಳಿಯಿಂದಾಗಿ ಕೊಡಗಿನ ಜನರು ದಿಕ್ಕುಗೆಟ್ಟಿದ್ದ ಮತ್ತು 85,000 ಕೊಡಗರನ್ನು ಕೊಡಗಿನಿಂದ ಹಿಡಿದು ಶ್ರೀರಂಗಪಟ್ಟಣದಲ್ಲಿ ಮುಸಲ್ಮಾನರನ್ನಾಗಿ ಮಾಡಿದ ವಿಷಯವನ್ನು ಪಿರಿಯಾಪಟ್ಟಣದ ಕೋಟೆಯಲ್ಲಿ ಕೈದಿಯಾಗಿದ್ದ ದೊಡ್ಡವೀರರಾಜೇಂದ್ರರು ತಿಳಿದು ಅವರ ಆಪ್ತರ ಮತ್ತು ಹೊಂಬಾಳೆ ನಾಯಕರ ಸಹಾಯದಿಂದ ಪಿರಿಯಾಪಟ್ಟಣದ ಕೋಟೆಯಿಂದ ತಪ್ಪಿಸಿಕೊಂಡು ಕುರುಚಿ ಗ್ರಾಮಕ್ಕೆ ಬಂದು ನಂತರ, ಸ್ವಲ್ಪ ಸಮಯದಲ್ಲಿ ನಾಲ್ಕುನಾಡಿನಲ್ಲಿ ಒಂದು ಅರಮನೆಯನ್ನು ನಿರ್ಮಿಸಿ ಕೈ ತಪ್ಪಿಹೋಗಿದ್ದ ಕೊಡಗನ್ನು ಪುನಃ ವಶ ಪಡಿಸಲು ಟಿಪ್ಪುಸುಲ್ತಾನರ ಹಾವಳಿಯಿಂದಾಗಿ ಬೆಟ್ಟ ಕಾಡುಗಳನ್ನು ಸೇರಿದ್ದ ಕೊಡಗರನ್ನು ಒಟ್ಟುಗೂಡಿಸಿ ಅವರುಗಳು ನೆಮ್ಮದಿಯಿಂದಿರುವಂತೆ ಮಾಡಿದರು. ಅಲ್ಲದೆ ಟಿಪ್ಪುಸುಲ್ತಾನರ ದಾಳಿಯಿಂದಾಗಿ ಕೊಡಗಿನ ಹೆಚ್ಚಿನ ಭಾಗಗಳಲ್ಲಿ ಕೃಷಿಮಾಡಲು ಜನರಿಲ್ಲದುದರಿಂದ ದಕ್ಷಿಣ ಕನ್ನಡ ಜಿಲ್ಲೆಯಿಂದ ಗ್ರಾಮಕ್ಕೆ 15 ಜನರಂತೆ ತಾವುನಾಡು, ಬೇಂಗುನಾಡು ಕಡಿಯತ್‌ನಾಡು, ಕುಯಂಗೇರಿ ನಾಡು, ಕಗ್ಗೋಡುನಾಡು, ಹೊರಮಲೆನಾಡುಗಳಿಗೆ ರೈತರನ್ನು ಕರೆತಂದು ವ್ಯವಸಾಯ ಮಾಡಲು ಭೂಮಿಯನ್ನು ಕೊಟ್ಟರು. ಈ ರೀತಿ ಬಂದವರಲ್ಲಿ ಹೆಚ್ಚಿನದಾಗಿ ಗೌಡರು ಮತ್ತು ಕೆಲವು ಬಂಟರು ಮತ್ತು ಇನ್ನಿತರರು ಈ ನಾಡುಗಳಲ್ಲಿ ಬಂದು ನೆಲೆ ನಿಂತರು.

[ಮುಂದಿನ ಸಂಚಿಕೆ ನೋಡಿ[

(ಮೂರನೇ ಪುಟದಿಂದ)

ನಮ್ಮದೆಯಾದ 'ಕೊಡಗು ಸಂಗಾತಿ' ಪತ್ರಿಕೆ ಇದೆ. ಅದಕ್ಕೆ ಕವಿತೆಗಳನ್ನು ಕೊಡುತ್ತಿದ್ದೇನೆ. ನಾನು ಸಭೆ, ಸಮಾರಂಭಗಳಲ್ಲಿ ಭಾಷಣಗಳನ್ನು ಹೆಚ್ಚಾಗಿ ಕವಿತೆ ರೂಪದಲ್ಲಿ ಹೇಳುತ್ತೇನೆ. ಹೀಗೆ ಹೇಳಬಯಸುವುದೇ ನನಗೆ ತುಂಬಾ ಸಂತೋಷವೆನಿಸುತ್ತದೆ.

ಸಂ : 'ಕೊಡಗು ಸಂಗಾತಿ' ಪತ್ರಿಕೆಯ ಬಗ್ಗೆ ಏನು ಹೇಳುತ್ತೀರಾ ?

ಉ : 'ಕೊಡಗು ಸಂಗಾತಿ' ನಮ್ಮೆಲ್ಲರ ಒಂದು ಅತ್ಯುತ್ತಮ ಮಾಧ್ಯಮ. ಅದು ನಮಗೆಲ್ಲರಿಗೂ ಬೇಕಾಗಿದೆ. ಅದಕ್ಕಾಗಿ ನಾನು ನಿಮಗೆ ನನ್ನ ಸ್ವರಚಿತ ಕವನಗಳನ್ನು ಕೊಡುತ್ತಾ ಬರುತ್ತೇನೆ. ಈ ಪತ್ರಿಕೆ ಮುಂದೆ ಬೆಳೆದು ದಾರಿದೀಪವಾಗಲಿ ಎಂದು ಹಾರೈಸುತ್ತೇನೆ.

ಸಂ : ಯುವಕರಿಗೆ ಏನು ಹೇಳುತ್ತಿರಾ?

ಉ : ಯುವಕರಿಗೆ ಸಾಹಿತ್ಯ ಮಟ್ಟದಲ್ಲಿ ಹೇಳಬೇಕೆಂದರೆ ನನ್ನಿಂದ ಆದ ಸಲಹೆ ಕೊಡಲು ನಾನು ಸದಾ ಸಿದ್ಧ. ಇಚ್ಛಿಸುವವರು ಮುಂದೆ ಬಂದರೆ ನಾನು ಸಹಕರಿಸುತ್ತೇನೆ. ಯುವಕರು ತಮ್ಮ ಬಿಡುವಿನ ವೇಳೆಯಲ್ಲಿ, ಸಮಾಜ ಸೇವೆಯಲ್ಲೂ, ಸಾಹಿತ್ಯ ರಚನೆಯಲ್ಲೂ ಇನ್ನೊಬ್ಬರಿಗೆ ಸಹಕರಿಸುವಲ್ಲೂ ತಮ್ಮನ್ನು ತಾವು ತೊಡಗಿಸಿಕೊಳ್ಳುವುದು ಸೂಕ್ತ.

ಸಂ : ನಮ್ಮ ಮಹಿಳೆಯರು ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದು ಕಡಿಮೆ ಎನಿಸಿದೆ ಇದಕ್ಕೇನು ಹೇಳುತ್ತೀರ ?

ಉ : ನಮ್ಮ ಸಮಾಜದಲ್ಲಿ ಮಹಿಳೆಯರಿಗೆ ಆದ್ಯತೆ ಕೊಟ್ಟಿದ್ದೇವು. ಅವರೇ ಹಿಂದೇಟು ಹಾಕುತ್ತಾ ಹಲವರು ಸಮಾಜದ ಕಡೆ ಬರುವುದನ್ನೇ ನಿಲ್ಲಿಸಿದರು. ಹೀಗಾಗಬಾರದು ಮಹಿಳೆಯರೆ ಮುಂದೆ ಬಂದು ಕೆಲಸ ಕಾರ್ಯಗಳಲ್ಲಿ ತೊಡಗಿ ಸಮಾಜಕ್ಕೆ ಏನಾದರೂ ಕಿಂಚಿತ್ತು ಸಹಕರಿಸುವ ಮನೋಭಾವ ಹೊಂದುವುದು ಒಳ್ಳೆಯದು.

ದೃಢಕಾಯದ, ದೃಢನಿಲುವಿನ, ಹರಳು ಹುರಿದಂತೆ ಮಾತನಾಡುವ, ಸುಂದರಾಂಗ ಭವಾನಿಶಂಕರ್ 54 ವಸಂತಗಳನ್ನು ಕಂಡಿದ್ದಾರೆ. ಮನೆಯೊಡತಿ ಪಂಜಿಪಳ್ಳ ನಾಗಪ್ಪ ಗೌಡರ 8 ಹೆಣ್ಣು ಮಕ್ಕಳಲ್ಲಿ ಆರನೆಯವರಾದ ಸುಗುಣ. ಇವರು ಸಹ BEL ಉದ್ಯೋಗಿ. ಇವರಿಗೆ ಇಬ್ಬರು ಮಕ್ಕಳು. ಒಂದು ಹೆಣ್ಣು, ಗಾನಶ್ರೀ ಸಂಸಾರದೊಂದಿಗೆ ಆಸ್ಟ್ರೇಲಿಯದ ಸಿಡ್ನಿಯಲ್ಲಿ ವಾಸ. ಮಗ ಶಶಿಕಿರಣ ವ್ಯಾಸಂಗ ಮಾಡುವುದರೊಂದಿಗೆ Cable Network ನಡೆಸುತ್ತಿದ್ದಾನೆ. ಹೀಗೆ ಸುಖ ಸಂಸಾರದೊಂದಿಗೆ ಬೆಂಗಳೂರಿನ ಬೆಮೆಲ್ ನಗರದಲ್ಲಿ ವಾಸವಾಗಿದ್ದಾರೆ. ನಿವೃತ್ತಿಯ ಹಾದಿಯಲ್ಲಿರುವ ಭವಾನಿಶಂಕರ್‌ಗೆ ಮುಂದೆ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವ ಹಂಬಲವಿದೆ. ಇವರಿಗೆ ನಮ್ಮ ಜನಾಂಗದ ಪರವಾಗಿ 'ಸಂಗಾತಿ' ಹಾರ್ದಿಕ ವಂದನೆ ಮತ್ತು ಶುಭವನ್ನು ಕೋರುತ್ತದೆ.

ಗೌಡ ಜನಾಂಗದ ವಿಶ್ವಕೋಶವಾಗಿದ್ದ ದಿ|| ಕೋ. ಸ. ಕಾರ್ಯಪ್ಪ

ಮಣ್ಣಿನಲ್ಲಿ ಮಣ್ಣಾದ ಜನಾಂಗದ ಹಿರಿಮೆಯನ್ನು ಗೌಡಜನಾಂಗದ ಯುವ ಪೀಳಿಗೆಗೆ ತಮ್ಮ ಜನಾಂಗದ ಬಗ್ಗೆ ತಿಳಿಯಲು ಸಹಾಯಕವಾಗಿರುವ ಜೀವಂತ ವಿಶ್ವಕೋಶದ ಬಗ್ಗೆ. ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಯ ಗೌಡ ಜನಾಂಗದ ಬಗ್ಗೆ ಮಾಹಿತಿಯನ್ನು ನೀಡಲು ಲಭ್ಯವಿರುವ ವಿಶ್ವಕೋಶದ ಬಗ್ಗೆ. ಆ ವಿಶ್ವಕೋಶವೇ ಭಾಗಮಂಡಲನಾಡು ಬಲ್ಲಮಾವಟಿ ಗ್ರಾಮದ ಕೋಟೇರ ಯಾ ಕೈಮುಂಡನ ಸಣ್ಣಯ್ಯ ಕಾರ್ಯಪ್ಪ (ಕೋ. ಸ. ಕಾರ್ಯಪ್ಪ) ಎಂದೇ ಕೊಡಗಿನಲ್ಲಿ ಪ್ರಖ್ಯಾತಿ.

ಕೋ. ಸ. ಕಾರ್ಯಪ್ಪನವರ ಜನನ 1924ರಲ್ಲಿ. ಸುಳ್ಯದ ಕೈಮುಂಡನ ಮನೆತನದಿಂದ ಬೊಮ್ಮಣ್ಣಗೌಡ ಎಂಬುವರು ದೊಡ್ಡಪುಲಿಕೋಟು ಗ್ರಾಮದಲ್ಲಿ ಬಂದು ನೆಲಸಿದರು. ಕೊಡವರು ಇವರನ್ನು ಬೊಮ್ಮಂಡ್ರ ಎಂದು ಈಗಲೂ ಕರೆಯುತ್ತಾರೆ. ಕೋ. ಸ. ಕಾ.ನವರ ತಂದೆ ಸಣ್ಣಯ್ಯ, ತಾಯಿ ಪೊನ್ನವ್ವ. ಬಡ ಕುಟುಂಬದಲ್ಲಿ ಜನಿಸಿದ ಕೋ. ಸ. ಕಾ. ನವರು ಬಾಲ್ಯದಲ್ಲಿಯೇ ಪ್ರತಿಭಾವಂತರಾಗಿದ್ದರು. ಪ್ರತಿಭೆ ಅನ್ನುವುದು ಅನುವಂಶೀಯವಾಗಿ ಬರುತ್ತದೆ ಎನ್ನುವುದಕ್ಕೆ ಕಾರ್ಯಪ್ಪನವರದು ಒಂದು ನಿದರ್ಶನ. ಏಕೆಂದರೆ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯನ್ನು ಬೇರ್ಪಡಿಸುವ ಗ್ರಾಮ ಪೆರಾಜೆ. ಪೆರಾಜೆ ಗ್ರಾಮದಲ್ಲಿ ಶೈಕ್ಷಣಿಕವಾಗಿ ವಿಶೇಷ ಹಿನ್ನಲೆಯುಳ್ಳ ಒಂದು ಕುಟುಂಬ ಮಾವಾಜಿಮನೆ. ಕೋ. ಸ. ಕಾ. ನವರ ಅಜ್ಜ ಅಂದರೆ ತಂದೆಯ ತಾಯಿ ಮಾವಜಿ ದಿವಂಗತ ರಾಮಣ್ಣನವರ ಅತ್ತೆ. ಅಂದರೆ ಕರ್ನಾಟಕದ ಅಡ್ವೋಕೇಟ್ ಜನರಲ್ ಆಗಿದ್ದು ಹಿರಿಯ ನ್ಯಾಯವಾದಿ ಶ್ರೀ ಎಂ. ಆರ್. ಜನಾರ್ಧನ ಇವರ ಅಜ್ಜಿ. ಹಾಗಾಗಿ ಕೋ. ಸ. ಕಾ.ನವರಿಗೆ ಈ ಮೂಲದಿಂದಲೂ ಪ್ರತಿಭೆ ಬಂದಿರುವ ಸಾಧ್ಯತೆ ಇದೆ.

ಕೋ. ಸ. ಕಾ. ನವರು ದ್ವಿತೀಯ ಜಾಗತಿಕ ಸಮರದ ಕಾಲದಲ್ಲಿ ಭಾರತೀಯ ಸೈನ್ಯದಲ್ಲಿ ಸೈನಿಕರಾಗಿ ಸೇರ್ಪಡೆಯಾದರು. ಮೂರನೇ ಮದ್ರಾಸ್ ರಿಜಿಮೆಂಟ್‌ನಲ್ಲಿ ಸೇರ್ಪಡೆಯಾದ ಕಾರ್ಯಪ್ಪನವರು ತರಬೇತಿಯ ಅವಧಿಯಲ್ಲಿ ಉತ್ತಮ ಕಾರ್ಯಸಾಧನೆ ಮಾಡಿರುವುದರಿಂದ ಇವರಿಗೆ ನಾಯಕ್‌ನಾಗಿ ಭಡ್ತಿ ದೊರೆಯಿತು. ದಿನಾಂಕ 1-10-1943ರಿಂದ 19-12-1946ರ ವರೆಗೆ ಭಾರತೀಯ ಸೈನ್ಯದಲ್ಲಿ ದ್ವಿತೀಯ ಮಹಾಯುದ್ಧದಲ್ಲಿ ಸೇವೆ ಸಲ್ಲಿಸಿ ಮುಂದೆ 9-10-1947ರಲ್ಲಿ ಕರ್ನಾಟಕದ ಪೋಲೀಸ್ ಇಲಾಖೆಗೆ ಸೇರಿಕೊಂಡರು. ಪೋಲೀಸ್ ಇಲಾಖೆಯಲ್ಲಿದ್ದುಕೊಂಡು ಸಾಹಿತ್ಯದ ಬಗ್ಗೆ ವಿಶೇಷ ಆಸಕ್ತಿ ವಹಿಸಿರುವ ಕಾರ್ಯಪ್ಪನವರು ಒಂದು ಅಪವಾದವೆನ್ನಬಹುದು. ಪೋಲೀಸ್ ಇಲಾಖೆಯಲ್ಲಿದ್ದಾಗ ಇವರಿಗೆ ದೊರೆಯುತ್ತಿದ್ದ ಮಾಸಿಕ ವೇತನ 16 ರೂ.ಗಳಲ್ಲಿ ಪ್ರತಿ ತಿಂಗಳೂ ಒಂದು ಪುಸ್ತಕವನ್ನು ಖರೀದಿಸಿ ಸಂಗ್ರಹಿಸುತ್ತಿದ್ದರು. ಇಲಾಖೆಯಲ್ಲಿರುವಾಗಲೇ ಗೌಡ ಜನಾಂಗದ ಚರಿತ್ರೆಯನ್ನು ತಿಳಿಯುವ ಹಂಬಲದಿಂದ ಮನೆ ಮನೆಗೆ ತೆರಳಿ ಗೌಡಜನಾಂಗದ ಆಚಾರ, ವಿಚಾರ, ಸಂಸ್ಕೃತಿಯ ಬಗ್ಗೆ ವಿಚಾರ ಸಂಗ್ರಹಿಸುತ್ತಿದ್ದರು. ಅಲ್ಲದೆ ಆ ಕಾಲದಲ್ಲಿ ಕೊಡಗಿನ ಕೆಲವು ಪ್ರಬಲ ಜನಾಂಗವು ತಾವೇ ಶ್ರೇಷ್ಠ. ಈ ಗೌಡ ಜನಾಂಗದವರು ಯಾವ ಪ್ರಯೋಜನಕ್ಕೂ ಬಾರದವರು ಎಂಬ ಅಭಿಪ್ರಾಯವನ್ನು ಹೊಂದಿದ್ದರು. ಅದಕ್ಕಾಗಿ ನಮ್ಮ ಜನಾಂಗದ ಹಿರಿಮೆಯನ್ನು ಕಾಪಾಡಬೇಕೆಂದು ಪಣತೊಟ್ಟ ಕೋ. ಸ. ಕಾರ್ಯಪ್ಪನವರು ತಾವು ಇಲಾಖೆಯಲ್ಲಿ ಇದ್ದುದರಿಂದ ತಮ್ಮ ಮಗನ ಹೆಸರಿನಲ್ಲಿ ಗೌಡ ಜನಾಂಗದ ಬಗ್ಗೆ ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ.

ಗೌಡ ಜನಾಂಗದ ಶ್ರೇಷ್ಠತೆಯ ಮೇಲೆ ಬೆಳಕು ಚೆಲ್ಲುವುದಕ್ಕಾಗಿ ಕೊಡಗಿನ ದಿನ

ಕೆ. ಜೆ. ದಿವಾಕರ, ಎಂ. ಎ.
ಭಾಗಮಂಡಲ.

ಪತ್ರಿಕೆ ಶಕ್ತಿಯು 1972ರಲ್ಲಿ "ಕೊಡಗಿನ ಗೌಡ ಜನಾಂಗ", "ಗೌಡ ಜನಾಂಗದ ಮದುವೆಯ ಕರೆಯೋಲೆ" ಎಂಬ ಎರಡು ಲೇಖನಗಳನ್ನು ಪ್ರಕಟಿಸಿದರು. ಸ್ವಾತಂತ್ರ್ಯ ಹೋರಾಟಗಾರ ದಿವಂಗತ ಗುಡ್ಡೆಮನೆ ಅಪ್ಪಯ್ಯಗೌಡ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಯ ಗೌಡ ಜನಾಂಗದ ವೀರಪುತ್ರರ ಬಗ್ಗೆ 1979ರಲ್ಲಿ "ಮಣ್ಣಿನಲ್ಲಿ ಮಣ್ಣಾಗಿರುವ ಜನಾಂಗದ ಹಿರಿಮೆ" ಎಂಬ ಶೀರ್ಷಿಕೆಯಡಿ ಬರೆದಿದ್ದಾರೆ. ಇವರ ಇತರ ಲೇಖನಗಳು "ಕಾಯತರ್ೋಡಿ ರಾಜ್ಯದ ವೀರಪುತ್ರರು [1991]" ಕೊಡಗಿನ ಇತಿಹಾಸದಲ್ಲಿ ಹೊಸ ಬೆಳಕು, ಕೊಡಗಿನ ಇತಿಹಾಸದಲ್ಲಿ ಪೋಲೀಸ್ ವ್ಯವಸ್ಥೆ, ಇತ್ಯಾದಿ.

ಗೌಡ ಜನಾಂಗದ ಹಿನ್ನೆಲೆಯನ್ನು ತಿಳಿಯಲು ಹಾಗೂ ಜನಾಂಗಕ್ಕೆ ಕೊಡಗಿನಲ್ಲಿ ಒಂದು ಸ್ಥಾನಮಾನವನ್ನು ನೀಡಲು ಕೋ. ಸ. ಕಾರ್ಯಪ್ಪನವರು ತಮ್ಮ ಲೇಖನಿಯನ್ನೇ ಖಡ್ಗವಾಗಿ ಹಿಡಿದಿರುವುದು ಪ್ರಶಂಸನೀಯ. ಬಹುಷಃ ಲೇಖನಿಯು ಖಡ್ಗಕ್ಕಿಂತ ಹರಿತವಾದುದು ಎಂಬ ಮಾತನ್ನು ಇವರು ಬಹುಚೆನ್ನಾಗಿ ಅರಿತುಕೊಂಡಂತಿದೆ. ಇವರು ಸಂಗ್ರಹಿಸಿರುವ ಮಾಹಿತಿಗಳು ಗೌಡಜನಾಂಗದ ಬಗ್ಗೆ

ಅಧ್ಯಯನ ಮಾಡುವ ಯಾವನೇ ವ್ಯಕ್ತಿಗೂ ಸಮರ್ಪಕವಾದ , ಉತ್ತರವನ್ನು ನೀಡ ಬಲ್ಲುದು. ಡಾ|| ಪುರುಷೋತ್ತಮ ಬಿಳಿ ಮಲೆಯವರು ಪಿ. ಹೆಚ್. ಡಿ. ಪದವಿ ಪಡೆಯಲು ವಿಷಯ ಸಂಗ್ರಹಕ್ಕಾಗಿ ಇವರ ಸಹಾಯವನ್ನು ಪಡೆದಿರುವ ಬಗ್ಗೆಯೂ, ಕೊಡಗಿನ ಇನ್ನೊಬ್ಬ ಗೌಡಜನಾಂಗದ ಸಾಹಿತಿ, ಸಮಾಜ ಸುಧಾರಕ, ಚಲನಚಿತ್ರ ನಿರ್ಮಾಪಕ ಸಂಪಾಜೆಯ ಶ್ರೀ ಎನ್, ಎಸ್. ದೇವಿಪ್ರಸಾದ್‌ರವರು ಮಡಿಕೇರಿ ತಾಲ್ಲೂಕು ಅಭಿವೃದ್ಧಿ ಸದಸ್ಯರಾಗಿದ್ದಾಗ ಕೊಡಗು ಜಿಲ್ಲೆಯ ಪುನರ್‌ವಿಂಗಡನೆಗಾಗಿ ನೇಮಿಸಲ್ಪಟ್ಟ ವಾಸುದೇವರಾವ್ ಸಮಿತಿಯ ಮುಂದೆ ವಾದಿಸಬೇಕಾದಾಗ ಕೋ. ಸ. ಕಾರ್ಯಪ್ಪನವರ ಸಂಗ್ರಹ ಅಮೂಲ್ಯ ನಿಧಿಯಾಗಿ ಸಿಕ್ಕಿರುವ ಬಗ್ಗೆ ಉಲ್ಲೇಖಿಸಿದೆ. ಇದು ನಿಜಕ್ಕೂ ಹೆಮ್ಮೆಯ ವಿಷಯವಾಗಿದೆ. ಇಂತವರನ್ನು ಸಮಾಜ ಮರೆತಿರುವುದು ವಿಷಾದನೀಯ.

73 ವಸಂತಗಳನ್ನು ಕಳೆದಿರುವ ಕೋ. ಸ. ಕಾರ್ಯಪ್ಪನವರು ಕಡೆ ತನಕ ಕೂಡಾ ಕನ್ನಡಕವನ್ನು ಧರಿಸದೆ ನಿರರ್ಗಳವಾಗಿ ಓದು ಮತ್ತು ಬರೆಯಬಲ್ಲವರಾಗಿದ್ದರು. ಯಾವುದೇ ದುಶ್ಚಟಗಳಿಗೆ ಬಲಿಯಾಗದ ಇವರು ಸಸ್ಯಹಾರಿಗಳೂ ಹೌದು. ಗೌಡ ಜನಾಂಗದ ಯುವ ಪೀಳಿಗೆಗೆ ಇವರು ನೀಡುವ ಕರೆ ಏನೆಂದರೆ "ಜನಾಂಗದ ಚರಿತ್ರೆಯನ್ನು ಅಧ್ಯಯನ ಮಾಡಬೇಕು. ದುಶ್ಚಟಗಳಿಂದ ದೂರವಿರಬೇಕು. ನಾನೇನೋ ಅಲ್ಪ ಪ್ರಮಾಣದಲ್ಲಿ ವಿಷಯ ಸಂಗ್ರಹ ಮಾಡಿದ್ದೇನೆ. ಮುಂಬರುವ ಗೌಡ ಜನಾಂಗದ ಪೀಳಿಗೆಗೆ ನಮ್ಮ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಅಗತ್ಯವಾದ ವಿಷಯುಗಳನ್ನು ಸಂಗ್ರಹಿಸಿ ವ್ಯವಸ್ಥಿತವಾಗಿಡುವುದೇ ನನ್ನ ಆಶಯ" ಎಂಬುದು ಶ್ರೀಯುತರ ವ್ಯಥನಿಲುವು.

ಗೌಡ ಜನಾಂಗದ ಅಭಿವೃದ್ಧಿಗೆ ನಿರಂತರವಾಗಿ ಹಗಲಿರುಳು, ಶ್ರಮಿಸಿ ದುಡಿದು ಇಂದು ಕಣ್ಮರೆಯಾಗಿರುವ ದಿ|| ಶ್ರೀ ಕಾರ್ಯಪ್ಪನವರ ಆಶೋತ್ತರಗಳೆಲ್ಲವನ್ನು ಮುಂಬರುವ ಯುವ ಪೀಳಿಗೆಯು ಪೂರೈಸಲೆಂಬುದಾಗಿ ಜನಾಂಗದ ಪರವಾಗಿ ಕೊಡಗು ಸಂಗಾತಿ ಪ್ರಾರ್ಥಿಸುತ್ತದೆ. ●

ಸ್ನೇಹ ವಿಶ್ವ

ಪ್ರೀತಿಯೆಂಬ ವಿಶ್ವರಥವನೇರಿ
ಸ್ನೇಹದೊಡಲ ಪಯಣದಲ್ಲಿ
ಸಾಗಿ ಬಾರ ಬಾರ ಬಾರ ಮುಂದಕೆ
ಪಾಂಚ ಜನ್ಯ ನಾದ ದೊಡನೆ
ವೇಣು ಗಾನ ಶ್ರುತಿಯು ಸೇರಿ
ದೇವ ಲೋಕಧರೆಗೆ ತೋರ.

ದ್ವೇಷವೆಂಬ ಜಾಲದಿಂದ
ಶ್ಮಾಸನ ಹಾದಿ ಸಾಗದಲೆ
ಪ್ರೀತಿಯೆಂಬ ವಿಶ್ವವಸುವೆ
ಪುಷ್ಪ ವೃಷ್ಟಿ ರಥಕೆಯಿಂಪ
ವಿಶ್ವ ಪೂಜಾ ಫಲವೆ ನೀನು
ಸ್ನೇಹದೊಡಲ ಸೇರು ಬಾರ.

ಜೀವ ಜೀವದೊಳಗು ನೀನು
ಭಾವ ತಲ್ಪ ಹಾಲು ಜೇನು
ಲೋಕ ಪೊರೆವ ಶಕ್ತಿ ನೀನು
ನೀನು ನಾನು ಮರೆತರಿಲ್ಲ
ನಾವು ನೀವು ಐಕ್ಯ [ವಿಶ್ವದ] ಫಲವು
ಜಗದ ಕ್ಷೇಮ ವೆಮಗೆ ಚಿರವು.

● ಮುಂಡೋಡಿ ಸಿ. ಮಾದಯ್ಯ ಕಾವ್ಯಶ್ರೀ

ನಗೆ ಹನಿಗಳು

ಒಬ್ಬ : ಏನಪ್ಪಾ, ಸಂಬಳ ಬಂದ ತಕ್ಷಣವೇ ವಾಪಸ್ ಕೊಡ್ತೀನಿ ಎಂದು ತಗೊಂಡಿದ್ದ ದುಡ್ಡನ್ನು ನಾಲ್ಕು ತಿಂಗಳಾದರೂ ವಾಪಸ್ ಕೊಡಲಿಲ್ಲವಲ್ಲ.

ಇನ್ನೊಬ್ಬ : ಇನ್ನೂ ಕೆಲಸಾನೇ ಸಿಕ್ಕಿಲ್ಲ ಸ್ವಲ್ಪ ತಡೀರಿ.

❁ ❁ ❁

ಶಿಕ್ಷಕ : ಕಿಟ್ಟು, ಆನೆಗೂ, ಸೊಳ್ಳೆಗೂ ಇರುವ ವ್ಯತ್ಯಾಸವೇನು?

ಕಿಟ್ಟು : ಸೊಳ್ಳೆ ಆನೆ ಮೇಲೆ ಕೂರಬಹುದು ಸರ್ ! ಆದರೆ ಸೊಳ್ಳೆ ಮೇಲೆ ಆನೆ ಕೂರೋಕ್ಕಾಗಲ್ಲ.

● ವಿ. ಪವನ್, ಮೈಸೂರು.

❁ ❁ ❁

ತೆಗೆಯುತ್ತಾರೆ

ಪರೀಕ್ಷೆಯಲ್ಲಿ ಚೆನ್ನಾಗಿ ಬರೆಯಿರಿ
ಎಂದು ಹೇಳುತ್ತಾರೆ, ತಂದೆ–ತಾಯಿ
ಆದರೆ ಪರೀಕ್ಷೆಯಲ್ಲಿ ಮಕ್ಕಳು
ತೆಗೆಯುತ್ತಾರೆ "ಕುಂಬಳಕಾಯಿ"

● ಪೊನ್ನೇಟ ಬಿ. ಸುನಿಲ್

ಮಾನಾತುರು ಮಕ್ಕಳು (ಘಣಿ ಎರವರು)

ಆಕಾಶ ಗಂಡಾಗಿ, ಭೂಮಿ ಹೆಣ್ಣಾಗಿ ಬಿದ್ದಿರುವುದನ್ನು ಬೈನಾಡಪ್ಪ ಮತ್ತು 104 ದೈವಗಳು ಗುಂಪು ಸೇರಿ ಚಿನ್ನದ ಹಾರೆಯಿಂದ ಹೊಡೆದು ಬೇರ್ಪಡಿಸುತ್ತಾರೆ. ಭೂಮಿ ಅದುರತೊಡಗಿತು. ಆಕಾಶ ಹಾರತೊಡಗಿತು. ಉಮ್ಮಿರ ಮಿಚ್ಚ ಎಂಬಲ್ಲಿ ಹಾಸುಗಲ್ಲಿನ ಮೇಲೆ ಆಕಾಶ ಹಾರದಂತೆ, ಭೂಮಿ ಅದುರದಂತೆ ಒಂಭತ್ತು ಶಾಸನ ಕೆತ್ತಿದರೂ ಪ್ರಯೋಜನವಾಗುವುದಿಲ್ಲ. ಅವರು ಚಿತ್ತಾಂಗೊಟ್ಟು ಮುತ್ತಿಯಲ್ಲಿ ಹೋಗಿ ಕೇಳಿಕೊಂಡಾಗ, ಮೂರು ಮೊಟ್ಟೆ ಇಟ್ಟು ಕಂಗಾಲಾಗಿದ್ದ ಆಕೆ ಈ ಸ್ಥಿತಿಯಲ್ಲಿ ನನಗೆ ಸಾಧ್ಯವಾಗಲಾರದು ಎನ್ನುತ್ತಾಳೆ. ಬೈನಾಡಪ್ಪ ಆಕೆಯ ಒಂದು ಮೊಟ್ಟೆ ಒಡೆಯುತ್ತಾನೆ. ಹುಲ್ಲುಗಾವಲು, ಮರ, ಗಿಡ ಅದರಿಂದ ಹೊರಬರುತ್ತದೆ. ಎರಡನೆ ಮೊಟ್ಟೆ ಒಡೆದಾಗ ನಾನಾ ಜಾತಿ, 48 ಕುಲ, ಹಾವು, ಹಕ್ಕಿಗಳು ಹೊರಬರುತ್ತವೆ. ಮೂರನೆ ಮೊಟ್ಟೆ ಒಡೆದಾಗ ಆಕೆಗೆ ಶಕ್ತಿ ಬಂದು ಚಿತ್ತಾಂಗೊಟ್ಟು ಶಿಖರಕ್ಕೆ ಹಾರಿ ಕುಳಿತು ನಾಲ್ಕು ದಿಕ್ಕಿಗೆ ನಾಲ್ಕು ಬಾರಿ ಕುಟುಕಿ ಆಕಾಶ ಹಾರುವುದನ್ನು ನಿಲ್ಲಿಸುತ್ತಾಳೆ. ಭೂಮಿಗೆ ಒಂದು ಮೇಲೆ ಒಂದು ಕಣ್ಣು ಇರಿಸಿದಾಗ ಅದುರುವುದು ನಿಲ್ಲುತ್ತದೆ.

104 ದೈವಗಳು ಮತ್ತು ಬೈನಾಡಪ್ಪ ಮಾಯಿಲಿಕೋಟೆ ಕಟ್ಟುತ್ತಿರುವಾಗ ಕೆಲಸಗಾರರ ಎಂಜಲೆಲೆ ಹೆಕ್ಕಲು ಬಂದ ಮಾನಾತುರು (ಪಿಶಾಚಿ) ಮಕ್ಕಳನ್ನು ಬಲೆ ಬೀಸಿ ಹಿಡಿಯುತ್ತಾರೆ. ಅವರಲ್ಲಿ ಸಿಕ್ಕಿ ಬಿದ್ದ ಅಣ್ಣ ತಂಗಿ ಬತ್ತಲೆ ಇರುತ್ತಾರೆ. ಅವರಿಗೆ ಏಳುಮೊಳ ಬಟ್ಟೆ ತುಂಡುಗಳನ್ನು ಕೊಡುತ್ತಾರೆ. ಅವನ್ನು ಸೊಂಟದ ಕೆಳಗೆ ಸುತ್ತಿಕೊಳ್ಳುತ್ತಾರೆ. ಆ ಭಾಗ ಗಂಡ ಹೆಂಡತಿಯಾಗಿಯೂ, ಬತ್ತಲೆ ಉಳಿದ ಭಾಗ ಅಣ್ಣ ತಂಗಿಯಾಗಿಯೂ ಅವರು ಬಾಳುತ್ತಾರೆ. ಈ ಮೂಲ ಜೋಡಿ ಹೆಸರು ಅಂಜಿಲಾತ್ತು ಮುತ್ತಿ, ಪಾಸಲಾತ್ತು ಮುತ್ತಿ. ಇವರಿಗೆ 5 ಗಂಡು 5 ಹೆಣ್ಣು ಮಕ್ಕಳು.

ಮಾಯಿಲಿಕೋಟೆಯ ಒಡೆಯ ಮಾಯಿಲಿಮಾವ ಕಾರ್ಯ ನಿಮಿತ್ತ ಹೊರಗೆ ಹೋದಾಗ ಹೆಂಡತಿಗೆ "ಮಧ್ಯಾಹ್ನ ಬಂದವರಿಗೆ ಅನ್ನ ಕೊಡು, ಸಂಜೆ ಬಂದವರಿಗೆ ಚಳಿಗೆ ಬೆಂಕಿ, ಹೊದಿಕೆ ಕೊಡು ಎನ್ನುತ್ತಾನೆ". ಹೀಗೆ ಆತ ಹೊರಗೆ ಹೋಗಿದ್ದಾಗ ಆತನ ಅಣ್ಣನ ಮಗ ಬರುತ್ತಾನೆ. ಅವನಿಗೆ ಊಟ ಕೊಟ್ಟು, ಪೂರ್ವ ಜಗಲಿಯಲ್ಲಿ ಮಲಗುವ ಏರ್ಪಾಡು ಮಾಡುತ್ತಾಳೆ. ಅಲ್ಲಿ ಚೇಳು ಕಡಿದೀತು ಅಂದಾಗ ತನ್ನ ಮಂಚದಡಿಯ ಮಲಗಲು ಹೇಳುತ್ತಾಳೆ. ಅದಕ್ಕೂ ಒಪ್ಪದಾಗ–ತಾನೊಂದು ದಿಕ್ಕಿಗೆ ಆತನೊಂದು ದಿಕ್ಕಿಗೆ ತಲೆಹಾಕಿ ಮಲಗುವ ಒಪ್ಪಂದಕ್ಕೆ ಬರುತ್ತಾಳೆ. ಆದರೆ ನಿನ್ನ ತಲೆ ನನ್ನ ಕಾಲಿಗೆ, ನಿನ್ನ ಕಾಲು ನನ್ನ ತಲೆಗೆ ಮುಟ್ಟಬಾರದು ಎನುತ್ತಾಳೆ. "ಸತ್ತ ಸಾವು ಒಂದೇ ನಿದ್ದೆಯೂ ಒಂದೆ ತಲೆ ಕಾಲು ಮುಟ್ಟಿದರೆ ತಪ್ಪು ಎಣಿಸಬೇಡ" ಎಂದು ಹೇಳಿ ಮಲಗುತ್ತಾನೆ. ನಡುರಾತ್ರಿಯಲ್ಲಿ ತಲೆ ಕಾಲು ಮುಟ್ಟುತ್ತದೆ. ಮಾಮಿ ಉಟ್ಟ ಪಂಚೆಯಲ್ಲಿ ಕಪ್ಪು ಕಲೆ ಬಂದು ಅಂಟುತ್ತದೆ. ಮಾಯಿಲಿಮಾವು ವಿಚಾರಿಸಿದಾಗ ಬಾಳೆಕಾಯಿ ಕಡಿದಾಗ ಅಂಟಿದ ಕಲೆ ಎಂದು ಹೇಳುತ್ತಾಳೆ. ಅವಳ ಮೇಲೆ ಸಂಶಯ ಪರಿಹಾರಕ್ಕೆ ಬಾಣ ಪ್ರಯೋಗ ಮಾಡುತ್ತಾನೆ. ಆಕೆ ಕೈ ಮುಗಿದು ನಿಲ್ಲುತ್ತಾಳೆ. ಮಾವ ಬಿಟ್ಟ ಬಾಣ ಅವಳ ಏಳು ಮೊಳ ಕೂದಲಿಗೆ ಸಿಕ್ಕಿಕೊಳ್ಳುತ್ತದೆ. ಹೀಗೆ ಶಂಕೆ ಬಗೆಹರಿದು ಅಣ್ಣನ ಮಗನಿಗೆ ಎಲೆ ಅಡಿಕೆ ಕೊಟ್ಟು, ಆತನಿಂದ ತೆಗೆದುಕೊಂಡು ರಾಜಿಯಾಗುತ್ತಾರೆ.

ಮಾನಾತುರು ಎತ್ತುಗಳ ಸೊಂಟಕ್ಕೆ–ಬಾಲಕ್ಕೆ ನೊಗ ಕಟ್ಟಿ ಪ್ರಯೋಜನ ಆಗದಿದ್ದಾಗ ಪಿರಾಮೆ ಕೊಯಿಲಪ್ಪ ಕೊರಳಿಗೆ

● ಎಂ. ಎಸ್. ದೇವಿಪ್ರಸಾದ್
ಸಂಪಾಜೆ.

ನೊಗ ಇಟ್ಟು ಉಳುಮೆ ಮಾಡಲು ಹೇಳಿ ಕೊಡುತ್ತಾನೆ. ಬೇಸಾಯದಲ್ಲಿ ತೊಡಗಿದ ಇವರ ಭೂಮಿಯನ್ನು ಬಲಿಷ್ಠ ಜನಾಂಗದವರು ವಶಕ್ಕೆ ತೆಗೆದುಕೊಳ್ಳುತ್ತಾರೆ. ಅವರನ್ನು ಎದುರಿಸಲಾರದೆ ಓಡಿಹೋಗುತ್ತಾರೆ. ಕಣ್ಣೀರಿನಲ್ಲಿ ಗಂಜಿ ಕಾಯಿಸಬೇಕಾಗುತ್ತದೆ. "ನಮಗೀಗ ನೆಲವಿಲ್ಲ, ಕುಲವಿಲ್ಲ, ಅಪ್ಪ ಇಲ್ಲ, ಅಮ್ಮ ಇಲ್ಲ ನಮಗೆ ಇರುವವನು ಗುರು ಮಾತ್ರ" ಎಂದು ಕಾನ್ಯಕರೆ ಎಂಬಲ್ಲಿ ಹೋಗಿ ಗುರುವನ್ನು ಪ್ರಾರ್ಥಿಸಿ—ಆಕಾಶ ಹಾರುತ್ತದೆ, ಭೂಮಿ ಅದುರುತ್ತದೆ. ಮಾನಾತುರು ದಕ್ಷಿಣಕ್ಕೆ ಹೋಗುವ ಏಳು ಮೆಟ್ಟಲು ಹತ್ತಿ—ಇಲಿ ಹೆಗ್ಗಣಗಳೋ ಎನ್ನುವ ಹಾಗೆ ಅವಿತುಕೊಂಡು ಬದುಕುತ್ತಾರೆ.

ಲಂಚ

ಲಂಚ ಚಂಚ
ಲಂಚವೆಂದು
ಲಂಚದಲ್ಲಿಯೇ
ಮುಳುಗುತ್ತಿರುವನು
ಕೊನೆಗೊಮ್ಮೆ
ಬೀಳುವನು
ಏಳಲಾರದೆ
ಮಂಚವನ್ನು

● ಕೋಳಿಮಾಡು ಪಿ. ಭವಾನಿ
ವೀರಾಜಪೇಟೆ.

ನಮ್ಮ ಜನಾಂಗದ ಪ್ರಥಮ ಮಹಿಳಾ ತಹಶೀಲ್ದಾರ್ ಮುಕ್ಕಾಟಿ ಮುತ್ತಮ್ಮ ಉಲ್ಲಾಸ್

ವ್ಯಕ್ತಿ ಪರಿಚಯ ವ್ಯಕ್ತಿಗಾಗಿ ಅಲ್ಲ. ನಮ್ಮ ಸಮಾಜದ ಶಕ್ತಿಗಾಗಿ, ಹಿರಿಯರ ಹೆಜ್ಜೆ–ಕಿರಿಯರ ಕಾಲ್ಗೆಜ್ಜೆ. ಎಲ್ಲಾ ಗ್ರಾಮ ದಂತೆ ನಮ್ಮೂರ ಹೆರವನಾಡು ಅಂದೂ ಅದೇ ಇಂದೂ ಇದೆ. ಮಡಿಕೇರಿ ತಾಲ್ಲೂಕು ಹೆರವನಾಡು ಗ್ರಾಮದ ಬೆಪ್ಪುರನ ಪಳಂಗಪ್ಪ–ಸೀತವ್ವ ದಂಪತಿಯರ ಹತ್ತು ಮಕ್ಕಳಲ್ಲಿ ಹಿರಿಯಳಾಗಿ 1940ರಲ್ಲಿ ಜನಿಸಿ ಸಿದಳು.

ಮುತ್ತಮ್ಮನವರು ತಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಬೆಟ್ಟಗೇರಿ ಶಾಲೆಯಲ್ಲಿ ಕಳೆದರು. ಬರೇ ವಿದ್ಯಾರ್ಥಿಯಾಗಿ ಕಳೆಯಲಿಲ್ಲ. ಮನೆ ಕೆಲಸ, ಕೊಟ್ಟಿಗೆ ಕೆಲಸ, ತನ್ನ ತಂಗಿ ತಮ್ಮಂದಿರ ರಕ್ಷಣೆ ತಂದೆ ತಾಯಿಯರ ಸೇವೆ, ಅಡಿಗೆ ಮನೆ ಸೇವೆ ಹೀಗೆ ಸೇವೆಯನ್ನೇ ಬದುಕಾಗಿ ಸಾಗಿಸಿದರು. ಹೆಣ್ಣು ಎಂದರೆ ಕಣ್ಣೀರು ! ನಾಣ್ಯಕ್ಕೆ ಎರಡು ಮುಖ. ಹೆಣ್ಣಿಗೂ ಎರಡು ಮುಖ. ಒಂದು ಹೆಣ್ಣು, ಇನ್ನೊಂದು ಕಣ್ಣೀರು ಇದೇ ನಮ್ಮ ಸಮಾಜದ ಸಮಸ್ಯೆ. ಮನೆ ಕೆಲಸವೆಲ್ಲಾ ಮಾಡಿಕೊಂಡು ಶಾಲೆಗೆ ನಡೆದುಕೊಂಡು ಹೋಗಬೇಕು. P W D ಇಲಾಖೆಯಲ್ಲಿ ಇಂಜಿನಿಯರ್ ಆಗಿದ್ದ ತಂದೆಗೆ ಮಡಿಕೇರಿಯಲ್ಲಿ ಕೆಲಸಕ್ಕೆ ಅವಕಾಶ ಸಿಕ್ಕಿತು. ಇವರ ಫಲಿತಾಂಶ 8ರಿಂದ 18ನೇ ತರಗತಿಯವರೆಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ. ಮಡಿಕೇರಿಯಲ್ಲಿಯೇ ಪಿ. ಯು. ಸಿ.ಗೆ ಮುಕ್ತಾಯ.

ಸೋಮವಾರಪೇಟೆ (B. D. O) ಆಫೀಸಿನಲ್ಲಿ 1962ರಲ್ಲಿ ಎರಡನೆ ದರ್ಜೆಯ ಕಾರಕೂನರಾಗಿ ನೌಕರಿಗೆ ಸೇರಿದರು. 16 ವರ್ಷ ಅದೇ ಆಫೀಸಿನಲ್ಲಿ ದುಡಿದರು. 1978–80ರ ವರೆಗೆ ಒಂದನೆ ದರ್ಜೆಯ ಕಾರಕೂನರಾಗಿ D. C. ಆಫೀಸ್ ಮಡಿಕೇರಿಗೆ ವರ್ಗಾವಣೆ. 1980–82 A. C. Office ಮಡಿಕೇರಿ, 1982–86ರ ವರೆಗೆ Land Aquisition of office ಕುಶಾಲನಗರ ಕಚೇರಿಯಲ್ಲಿ ಮೇನೇಜರ್ ಹುದ್ದೆ. 1987–88 ಶಿರಸ್ತದಾರರಾಗಿ ಬಡ್ತಿ ಪಡೆದು ಪಿರಿಯಾಪಟ್ಟಣ ತಾಲ್ಲೂಕು ಕಚೇರಿಯಲ್ಲಿದ್ದರು. 1989–91 ಮೇನೇಜರ್/ಶಿರಸ್ತೆದಾರ್‌ರಾಗಿ Land Aquisition office ಕುಶಾಲನಗರ 1991–95 ಸೋಮವಾರಪೇಟೆ ತಾಲ್ಲೂಕು ಆಫೀಸ್ ಶಿರಸ್ತೆದಾರ್. 1995–97ರಲ್ಲಿ 2ನೇ ದರ್ಜೆಯ ತಹಶೀಲ್ದಾರರಾಗಿ ಬಡ್ತಿ ಪಡೆದು D.C. ಕಚೇರಿಯಲ್ಲಿ ಮುನ್ಸಿಪಲ್ ತಹಶೀಲ್ದಾರರಾಗಿ ಬಡ್ತಿ ಪಡೆದ ಗೌಡ ಜನಾಂಗದ ಪ್ರಪ್ರಥಮ ಮಹಿಳಾ ತಹಶೀಲ್ದಾರ್ ಪೀಠವನ್ನು ಅಲಂಕರಿಸಿದರು. ಇದು ನಮ್ಮ ಗೌಡ ಜನಾಂಗಕ್ಕೆ ಹೆಮ್ಮೆ ! ಇಂಥಾ ಹೆಮ್ಮೆಗಳನ್ನು ನಮ್ಮ ಸಮಾಜದ ಕಿರಿಯರು ಹಮ್ಮಿಕೊಳ್ಳಲಿ. 1997 ಜೂನ್ ತಿಂಗಳಿಂದ (ಕೋಡ್–1) ಪ್ರಥಮ ದರ್ಜೆಯ ತಹಶೀಲ್ದಾರರಾಗಿ ಮಡಿಕೇರಿ D.C. ಕಚೇರಿಯಲ್ಲಿ ದುಡಿಯುತ್ತಿದ್ದಾರೆ.



ಮುಕ್ಕಾಟಿರ ಮುತ್ತಮ್ಮ ಉಲ್ಲಾಸ್

1971 ಮೇನಲ್ಲಿ ಬಿಳಿಗೇರಿ ಗ್ರಾಮದ ಮುಕ್ಕಾಟಿರ [ದಿವಂಗತ] ಮುತ್ತಣ್ಣ, ಪುಟ್ಟಮ್ಮನವರ ಪುತ್ರ ಉಲ್ಲಾಸ್ ಜತೆ ವಿವಾಹ. ಸಂಸಾರಿಕ ಜೀವನಕ್ಕೆ ಕಠಿಣ ಪರಿಶ್ರಮ, ಸಂಸಾರ ಚಿಂತೆ, ಸಂಸಾರ ಭಕ್ತಿ, ಶ್ರದ್ಧೆ, ಛಲ, ಶಾಂತಿ, ಪ್ರೀತಿ, ಹೃದಯ ತುಂಬಿರುವಾಗ ಮುಟ್ಟಿದ್ದೆಲ್ಲಾ ಬಂಗಾರ ವಾಗದಿದ್ದರೂ ಭಂಗ ಬರಲಿಲ್ಲ. ಇದು ಮುತ್ತಮ್ಮನವರ ಜೀವನ ವೈಖರಿ.

ಕಛೇರಿಯಲ್ಲಿ ಅವಿರತ ದುಡಿತ. ಕಡತಗಳಲಿ ಏನೇ ಇರಲಿ ಅಂದಿನದು ಅಂದಿಗೆ ಮಾಡಿ ಮುಗಿಸುವ ಕಾರ್ಯ ದಕ್ಷತೆ. ಇದು ಉತ್ಪ್ರೇಕ್ಷೆಯಲ್ಲ. ಎಲ್ಲರನ್ನು ಮೆಚ್ಚಿಸಲಾಗದು. ಆದರೆ ಬಡವರು, ವಿದ್ಯೆಗಾಗಿ ಬರುವವರು, ನಿರ್ಗತಿಕ ಹೆಣ್ಣು ಮಕ್ಕಳು, ಅವಿದ್ಯಾವಂತರನ್ನು ವಂಚಿಸಿದರೆ ಪರಮಾತ್ಮ ನಮ್ಮನ್ನು ವಂಚಿಸುವನು. ಇದನ್ನು ಸಾರ್ವಜನಿಕರು ಅರ್ಥಮಾಡಿಕೊಳ್ಳಬೇಕು. ಏನೇ ಇರಲಿ ಇಂದು ಇವರು ಮಡಿಕೇರಿ ತಾಲ್ಲೂಕಿನ ತಹಶೀಲ್ದಾರ್. ಈ ಹೆಮ್ಮೆ ಅವರದ್ದಲ್ಲ. ನಮ್ಮ ಗೌಡ ಜನಾಂಗದ್ದು.

ಪ್ರಥಮ ಹೆಣ್ಣು ಮಗಳು, ಚತುರೆ B.Sc., ದ್ವಿತೀಯ ಪುತ್ರ ಪೃಥ್ವಿ., B. E., ತೃತೀಯ ದಿನಕ್ D. M. E. ಗೀತೆ ಹೇಳುತ್ತದೆ 'ಕರ್ಮಣ್ಯೇವಾಧಿಕಾರಸ್ತೆ' ಇದು ಮುತ್ತಮ್ಮನವರಿಗೆ ಪೂರ್ಣ ಅನ್ವಯಿಸುವುದು. ಕರ್ತವ್ಯ, ಕರ್ಮಪರಾಯಣಳು.

ಎರಡನೆ ದರ್ಜೆ ಕಾರಕೂನದಿಂದ ತಾಲ್ಲೂಕು ತಹಶೀಲ್ದಾರ ಹುದ್ದೆಯವರೆಗೆ ಹಂತ ಹಂತವಾಗಿ ಏರಿದರು. ಇಂದಿನ ಶಿಕ್ಷಣ ರೀತಿ ಅವರಿಗೆ ತೃಪ್ತಿ ತಂದಿಲ್ಲ. ವಿದ್ಯೆಗೆ ಪ್ರಥಮ ಸ್ಥಾನ. ಅನಕ್ಷರತೆ ಇರಲೇ

ಬಾರದು, ಡಿಗ್ರಿ ಆಧಾರಿತ ವಿದ್ಯೆಗಿಂತ ಕೈಗಾರಿಕಾಧಾರಿತ ವಿದ್ಯೆ ಲೇಸು. ವಿದ್ಯೆ ಕಲಿತ ಯುವಕ ಯುವತಿಯರು ತಂದೆ ತಾಯಂದಿರಿಗೆ ಕೃತಜ್ಞತೆ ತೋರಿಸಬೇಕು. ಅಲಂಕಾರ ಬೇಕು. ಅಲಂಕಾರ ಸರ್ವಸ್ವ ಆಗಬಾರದು. ಮಾದಕ ಪದಾರ್ಥಗಳ ವ್ಯಸನಿಗಳಾಗಬಾರದು. ಮನೆಯ ಸರ್ವ ಕೆಲಸ ಕಲಿತಿರಬೇಕು. ಹಿರಿಯರಿಗೆ ಗೌರವ, ಕಿರಿಯರಿಗೆ ದಾರಿ ದೀಪ, ಗೆಳೆಯರಲ್ಲಿ ಅನು ಕಂಪವಿರಬೇಕು. ಸಮಾಜಕ್ಕೆ ನಮ್ಮಿಂದ ಸಾಧ್ಯವಾದಷ್ಟು ಕೊಡಬೇಕು. ನಿರ್ಲಕ್ಷಿಸ ಬಾರದು." ಇವು ಅವರ ಹೃದಯದ ಅಂತ ರಾಳದ ಮಾತು ಮತ್ತು ಅನಿಸಿಕೆ.

ತಹಶೀಲ್ದಾರರಾಗಿ, ತಾಲ್ಲೋಕು ದಂಡಾಧಿ ಕಾರಿಯಾಗಿ, ಕಾರ್ಯ ನಿರ್ವಹಿಸುತ್ತಿರುವ ಶ್ರೀಮತಿ ಮುತ್ತಮ್ಮ ಉಲ್ಲಾಸ್ ಇವರ ದುಡಿಮೆ ಇತರರಿಗೆ ಮಾರ್ಗದರ್ಶನವಾಗಲಿ. ಎಂದು ಕೊಡಗು ಸಂಗಾತಿ ಬಯಸುತ್ತದೆ.

● **ಚೇಂದ್ರಿಮಾಡ ಜಿ. ಮುತ್ತಪ್ಪ**
ಕುಶಾಲನಗರ.

: ಸೂಕ್ತಿ :

ಅರಿವೇ ಗುರು, ಕಾಯಕವೇ ಕೈಲಾಸ.
ಆಚಾರವೇ ಸ್ವರ್ಗ. ಅನಾಚಾರವೇ ನರಕ
ಅರಿದೊಡೆ ಶರಣ ಮರಿದೊಡೆ ಮಾನವ.
ಮೃದು ವಚನಗಳೇ ಸಕಲ ಜಪ ಜಪ.
ದೇಹವೆ ದೇಗುಲ. ಮನವೇ ಲಿಂಗ.
ಸತ್ಯವ ನುಡಿಯುವುದೇ ದೇವಲೋಕ.
ಅನುಭವವೆಂಬುದು ಆತ್ಮ ವಿದ್ಯೆ.
ಹೊನ್ನು ಹೆಣ್ಣು ಮಣ್ಣು ಮಾಯೆಯಲ್ಲ
ಮಾನವ ಮುಂದಣವೇ ಮಾಯೆ
ಮಾತೆಂಬುದು ಜ್ಯೋತಿರ್ಲಿಂಗ.
ಎನ್ನ ನಾಲಿಗೆ ಎನ್ನ ಕೊಂದಿತು.

● **ಗುಣಾ ರಮೇಶ್**
ಮೈಸೂರು.

ನಿಜವಾಗಿಯೂ ದೆವ್ವ-ಭೂತಗಳಿವೆಯೇ ?

ಯಾವುದೇ ಧರ್ಮ ಅಥವಾ ಜನಾಂಗ ದವರಾಗಲಿ, ದೆವ್ವ, ಭೂತಗಳನ್ನು ಸ್ವಲ್ಪ ಮಟ್ಟಿಗೆ ನಂಬುತ್ತಾರೆ. ಅವುಗಳು ಇವೆಯೋ ಇಲ್ಲವೋ ಎಂಬ ಬಗ್ಗೆ ಪತ್ರಿಕೆ ಗಳಲ್ಲಿ ಆಗಾಗ ಬರುವ ಕಥೆಗಳು ಸ್ವಲ್ಪ ಮಟ್ಟಿನ ಬೆಳಕು ಚೆಲ್ಲುತ್ತವೆ. ತಾವು ಭೂತವನ್ನು ಕಣ್ಣಾರೆ ನೋಡಿರುವುದಾಗಿ ಕೆಲವು ಜನ ಹೇಳಿಕೊಳ್ಳುತ್ತಾರೆ. ಮತ್ತೆ ಕೆಲವರು ಅದನ್ನು ಕೇಳಿದರೆ ಸಾಕು, ಹೆದರಿ ನಡುಗುತ್ತಾರೆ.

ಮನುಷ್ಯ ಸತ್ತಮೇಲೆ ಅವನ ಕರ್ಮಾನು ಸಾರ ದೆವ್ವ ಅಥವಾ ಭೂತವಾಗುವುದೆಂಬ ನಂಬಿಕೆ ಹಿಂದೂ ಧರ್ಮದಲ್ಲಿದೆ. ಅವಕ್ಕೆ ಯಾವುದೇ ನಿರ್ದಿಷ್ಟ ರೂಪವಿಲ್ಲ. ಅವು ಯಾವ ರೂಪವನ್ನು ಬೇಕಾದರೂ ತಳೆಯ ಬಹುದು. ಅವು ಕಣ್ಣಿಗೆ ಕಾಣಿಸಬಹುದು ಅಥವಾ ಅದೃಶ್ಯವಾಗಬಹುದು. ಸಾಮಾನ್ಯ ವಾಗಿ ಜನ ವಾಸಿಸದ ಕಟ್ಟಡಗಳು, ರುದ್ರ ಭೂಮಿ, ಕೊಳಗಳು, ನಿರ್ಜನ ಪ್ರದೇಶಗಳು ಪಾಳುಬಿದ್ದ ಬಾವಿಗಳು, ದೊಡ್ಡ ಮರ ಗಳು ಇತ್ಯಾದಿ ಅವುಗಳ ವಾಸ ಸ್ಥಾನ ಗಳೆಂದು ನಂಬಲಾಗಿದೆ.

ಸತ್ತವರ ಭೂತ, ಬದುಕಿರುವವರನ್ನು ಕಾಡದಿರಲೆಂಬ ಉದ್ದೇಶದಿಂದ, ಕೆಲವು ಧಾರ್ಮಿಕ ವಿಧಿ ಹಾಗೂ ಸಂಸ್ಕಾರವನ್ನು ನೆರವೇರಿಸಲಾಗುವುದು. ಆದರೆ ಈ ವಿಷಯ ದಲ್ಲಿ ವಿಜ್ಞಾನಿಗಳ ಅಭಿಪ್ರಾಯವೇ ಬೇರೆ. ದೆವ್ವ-ಭೂತಗಳು ಕೇವಲ ಮಾನಸಿಕಕಲ್ಪನೆ ಅವು ಮನುಷ್ಯನ ಕಣ್ಣುಗಳು ಮತ್ತು ಮನ ಸ್ಸಿನ ಭ್ರಮೆ. ಯಾವುದೋ ಒಂದು ವಸ್ತು ವನ್ನು, ಮನಸ್ಸು ಮತ್ತು ಕಣ್ಣು ಭ್ರಮಿ ಸುವ ರೀತಿಯೇ ಬೇರೆ. ಇಂತಹ ಭ್ರಮೆಗೆ ಮರಳುಗಾಡಿನ ಮರೀಚಿಕೆ ಒಂದು ನಿದ ರ್ಶನ. ಬಾಯಾರಿದ ಜಿಂಕೆ ಸ್ವಲ್ಪ ದೂರ ದಲ್ಲೇ ಇದ್ದಂತೆ ಕಾಣುವ ನೀರನ್ನು ಕುಡಿ ಯಲು ಓಡುತ್ತವೆ. ಅದು ಎಷ್ಟು ದೂರ ಓಡಿದರೂ ನೀರು ಸಿಗುವುದಿಲ್ಲ. ಕಡೆಗೆ ಓಡಿ ಓಡಿ ದಣಿದ ಜಿಂಕೆ ಸಾಯುತ್ತದೆ. ಮರುಭೂಮಿಯಲ್ಲಿ ಬಿಸಿಲಿನ ಆಂತರಿಕ ಪ್ರತಿಬಿಂಬ ನೀರು ಇದೆಯೆಂಬ ಭ್ರಮೆ ಉಂಟುಮಾಡುತ್ತದೆ. ಆದರೆ ನಿಜ ವಾಗಿ ನೀರು ಇರುವುದಿಲ್ಲ. ಬಿಸಿಲಿನ ಪ್ರತಿ ಬಿಂಬದಿಂದ ಗಿಡಮರಗಳ ತಲೆ ಕೆಳಗಾದ ಬಿಂಬಗಳು ಮೂಡಿ, ಅಲ್ಲಿ ನೀರು ಇದೆ ಯೆಂಬ ಭ್ರಮೆ ಹುಟ್ಟಿಸುತ್ತದೆ.

ಮನಸ್ಸಿನ ಕಾತುರತೆ ಮತ್ತು ಉದ್ವೇಗ ದಿಂದ ಭ್ರಮೆ ಉಂಟಾಗುತ್ತದೆ. ಕೆಲವು ಮಾದಕ ದ್ರವ್ಯಗಳು ಸಹ ಭ್ರಮೆ ಹುಟ್ಟಿಸು ತ್ತದೆ. ಅಂತಹ ಪರಿಸ್ಥಿತಿಯಲ್ಲಿ ಮನುಷ್ಯ ನಿಗೆ ಬೇರೆ ಬೇರೆ ಧ್ವನಿ ಕೇಳಿಸುತ್ತದೆ. ವಿಚಿತ್ರ ಪ್ರಾಣಿಗಳನ್ನು ನೋಡುತ್ತಾನೆ. ಕೆಲವು ವೇಳೆ ಭಯ ಹುಟ್ಟಿಸುವಷ್ಟು ಬೃಹದಾಕಾರದ ಮುಖ ಕಣ್ಣ ಮುಂದೆ ನಿಲ್ಲುತ್ತದೆ. ಕೊಕೇನ್ ಪ್ರಭಾವವಿದ್ದಾಗ, ಮೈ-ಚರ್ಮದ ಮೇಲೆ ಕೆಲವು ಕೀಟಗಳು ಹರಿದಾಡುತ್ತಿರುವಂತೆ ಭಾಸವಾಗುತ್ತದೆ. ಆದ್ದರಿಂದ ದೆವ್ವ-ಭೂತಗಳು ಭ್ರಮೆಯೇ ಹೊರತು ವಾಸ್ತವವಲ್ಲ ಎಂಬ ತೀರ್ಮಾ ನಕ್ಕೆ ವಿಜ್ಞಾನಿಗಳು ಬಂದಿದ್ದಾರೆ.

● **ಪಟ್ಟಡ ನೀಶಾ ಪ್ರಭಾಕರ್**
ಮೈಸೂರು

ಮಂಥನ

ಸಮಾಜದ ಬಾಂಧವರೆ....
ಏಳಿ ಎದ್ದೇಳಿ ಗುರಿ ಸಾಧಿಸುವ ತನಕ ನಿಲ್ಲದಿರಿ

ಕಿತ್ತಳೆ ಹಣ್ಣಿಗೆ ಪ್ರಸಿದ್ಧಿಯಾದ ಕರ್ನಾಟಕದ ಕಾಶ್ಮೀರ ಹಾಗೂ ಶ್ರೀ ಕಾವೇರಿ ಉಗಮಸ್ಥಾನ ಕೊಡಗಿನ ಬಗ್ಗೆ ಯಾರಿಗೆ ತಾನೇ ಗೊತ್ತಿಲ್ಲ ?

ಕೊಡಗಿನ ಸಂಸ್ಕೃತಿಯ ಬಗ್ಗೆ ಮಾತ ನಾಡುವಾಗ, ಬಹುತೇಕ ಮಂದಿ ಕೊಡವ ಜನಾಂಗ ಮತ್ತು ಭಾಷೆಯನ್ನು ಗುರುತಿಸು ತ್ತಾರೆ, ಆದರೆ ಸುಮಾರು 7 ಸಾವಿರ ವರ್ಷಗಳಿಷ್ಟು ಹಳೆಯದಾದ, ಇಲ್ಲೇ ಹುಟ್ಟಿ ಬೆಳೆದು ಇಲ್ಲಿಯ ಸಂಸ್ಕೃತಿಯ ಅಂಗವಾಗಿ ಬೆಳೆದು ಈ ಸಂಸ್ಕೃತಿಗೆ ಬಹಳಷ್ಟು ಅರ್ಪಿಸಿ ಕೊಂಡಿರುವ ಗೌಡ ಜನಾಂಗದ ಬಗ್ಗೆ ಅರಿ ವಿರುವವರು ಇಂದು ಬಹಳ ಕಡಿಮೆ.

ಕನ್ನಡಕ್ಕೆ ಬಹಳ ಸಮೀಪವಾದ ಅಂದರೆ, ಅರೆಗನ್ನಡವೆಂದು ಕರೆಯಲ್ಪಡುವ ಭಾಷೆ ಯೊಂದನ್ನು ತಮ್ಮದಾಗಿಸಿಕೊಂಡು ಭೌಗೋಳಿಕವಾಗಿ ದಕ್ಷಿಣ ಕನ್ನಡ ಹಾಗೂ ಕೊಡಗಿನಲ್ಲಿ ಗರಿಷ್ಠ ಮಟ್ಟದಲ್ಲಿ ಬೆಳೆದಿರುವ ನಮ್ಮ ಜನಾಂಗದವರು, ಇಷ್ಟಕ್ಕೇ ಸೀಮಿತ ವಾಗಿರದೆ ಇಂದು ಇತರ ಜಿಲ್ಲೆಗಳಲ್ಲೂ, ಪಸರಿಸಿ ಕೊನೆಗೆ ಸಾಗರದಾಚೆಯೂ ಹಾರಿ ದ್ದಾರೆ.

ನಮ್ಮ ಜನರ ಸಾಂಸ್ಕೃತಿಕ, ಸಾಮಾಜಿಕ ಆಶಯಗಳನ್ನು ಬಹು ಸಾಂಖಿಕ ಸಮಾಜಕ್ಕೆ ಅರಿವು ಮೂಡಿಸಲು ಹಾಗೂ ನಮ್ಮದೇ ಉನ್ನತಿಗಾಗಿ ಹಲ ಕೆಲವು ಗೌಡ ಸಮಾಜದ ಸಂಘಟನೆಗಳು ಉದಯಿಸಿವೆ ಯಾದರೂ, ಯಾವುದೇ ಸಂಸ್ಥೆಯ ಉದ್ಧಾ ರಕ್ಕೆ ಹಾಗೂ ಉದ್ದೇಶಗಳು ಈಡೇರಿಸಲು ಯುವ ಶಕ್ತಿಯ ಅವಶ್ಯಕತೆಯಿದೆ.

ಈ ಉದ್ದೇಶಕ್ಕಾಗಿಯೇ ನಮ್ಮ ಜನಾಂಗದ ಯುವ ಸಂಘಟನೆಯೊಂದು ಬೆಂಗಳೂರಿನಲ್ಲಿ ಉದಯಿಸಿರುವುದು ಈ ಸಮಾಜದ ಏಳಿಗೆಯ ಮೊದಲ ಹೆಜ್ಜೆಯಾಗಿದೆ ಎಂಬುದು ಹೆಮ್ಮೆಯ ವಿಷಯ. ಇದೊಂದು ಆರೋಗ್ಯಕರವಾದ ಬೆಳವಣಿಗೆ ಎನ್ನ ಬಹುದು.

ಈ ಸಂಘಟನೆಯ ಸಾರಥ್ಯವಹಿಸಿರುವ ಶ್ರೀಯುತ ತೆಕ್ಕಡೆ ಕಾವೇರಪ್ಪನವರ ಸಾಹಸಕ್ಕೆ ನಾವೆಲ್ಲರೂ ಶುಭವನ್ನು ಕೋರೋಣ. ಹಾಗೆಯೇ ಇಂತಹ ಸಂಘಟನೆ ಗಳು ಕೆಲವು ಪ್ರದೇಶಗಳಿಗೇ ಸೀಮಿತವಾಗಿರದೆ ಇತರ ಕಡೆಗಳಲ್ಲೂ ಬೆಳೆದಾಗ ನಮ್ಮ ಜನಾಂಗದವರನ್ನು, ಸಾಂಸ್ಕೃತಿಕವಾಗಿಯೂ, ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಡು ವಂತೆ ಮಾಡುವುದು ಎಲ್ಲರ ಧ್ಯೇಯವಾಗಲಿ.

ವಿವೇಕಾನಂದರ ವಾಣಿಯಂತೆ 'ಯುವ ಶಕ್ತಿಯೇ ಜನ ಶಕ್ತಿ'—'ಏಳಿ ಎದ್ದೇಳಿ ಗುರಿ ಸಾಧಿಸುವ ತನಕ ನಿಲ್ಲದಿರಿ' ಎಂಬ ಸಂಘಟನೆಯ ಧ್ಯೇಯವನ್ನು ನಮ್ಮ ಯುವ ಜನಾಂಗ ಮನನ ಮಾಡಿಕೊಂಡು ಜಾಗತಿಕ ಮಟ್ಟದಲ್ಲೂ, ನಮ್ಮ ಕೀರ್ತಿಯನ್ನು ಪಸರಿಸಲು ಕಂಕಣ ಬದ್ಧರಾಗೋಣ.

ಯುವ ಜನರ ಈ ಸಾಮಾಜಿಕ ಕಳಕಳಿಯನ್ನು ಶಕ್ತಿಯಾಗಿ ಪರಿವರ್ತಿಸುವಲ್ಲಿ ನಮ್ಮ ನಿಮ್ಮೆಲ್ಲರ ಸಹಕಾರ ಅಗತ್ಯವಿದೆ. ●

ಕು|| ಧನು ಚೆರಿಯಮನೆ
ಮೈಸೂರು

ಜೀವನದ ಧ್ಯೇಯ

○ ನಮ್ಮ ಜೀವನವನ್ನು ಒಳ್ಳೆಯ ರೀತಿಯಲ್ಲಿ ಹೇಗೆ ಸಾಧಿಸಬೇಕೆಂಬು ದನ್ನು ದಾವು ಮೊದಲು ಅರಿತುಕೊಳ್ಳಬೇಕು.

○ ಯಾವ ಕೆಲಸಕ್ಕೂ ಸಮಯಕ್ಕೆ ಸರಿಯಾಗಿ ನಾವು ತಲುಪುವುದು ನಮ್ಮ ನಡತೆಯಲ್ಲಿ ಒಂದು ಮುಖ್ಯಾಂಶ.

ಪೂಜಾರಿ ಪೂವಯ್ಯ, ಬೆಂಗಳೂರು.

ಕೊಡಗು ಗೌಡ ಯುವ ಸಂಘಟನೆಯ ಪ್ರಥಮ ವಾರ್ಷಿಕ ಕ್ರೀಡಾ ಕೂಟ ವನ್ನು ಬೆಂಗಳೂರಿನಲ್ಲಿ ಏರ್ಪಡಿಸಲಾಗಿದೆ. ಹಿರಿ/ಕಿರಿಯರೆಲ್ಲರೂ ಈ ಕ್ರೀಡಾ ಕೂಟದಲ್ಲಿ ಪಾಲ್ಗೊಳ್ಳಲು ಸರ್ವ ಬಾಂಧವರು ಕುಟುಂಬ ಸಮೇತರಾಗಿ ಪಾಲ್ಗೊಳ್ಳ ಬೇಕೆಂದು ವಿನಂತಿಸಲಾಗಿದೆ.

ದಿನಾಂಕ : **7-9-97** ಸಮಯ : ಬೆಳಿಗ್ಗೆ **8-00** ಘಂಟೆಗೆ

ಸ್ಥಳ :
ಮೈಕೋ ಸ್ಪೋರ್ಟ್ಸ್ ಗ್ರೌಂಡ್
ಆಡುಗೋಡಿ, ಬೆಂಗಳೂರು

ದಿ|| ಕೆ. ವೀರಪ್ಪಗೌಡ

ಸಜ್ಜನಕೆ ಸಜ್ಜನರು ಧುರ್ಜನಕೆ ಧುರ್ಜನರು
ಹೆಜ್ಜೇನಿನಂತವರು ವೀರಪ್ಪಗೌಡ ।
ಮಜ್ಜಿಗೆಯಲಿಬೆಣ್ಣೆ ಬೆರೆತು ಒಳಗಿರುವಂತೆ
ಸುಜ್ಞಾನದಾ ಜ್ಯೋತಿ ವೀರಪ್ಪಗೌಡ ॥

ಹಿರಿಯರಲಿ ಹಿರಿತನವ ಕಿರಿಯರಲಿ ನಯಗುಣವ
ತೋರುತಿದ್ದರು ಅವರೆ ವೀರಪ್ಪಗೌಡ ।
ಹರೆಯವದು ತುಂಬಿರಲು ಮರೆಯಲಾಗದ ಗುಣವ
ಬರೆದು ಮುಗಿಯದ ಕಥೆಯು ವೀರಪ್ಪಗೌಡ ॥

ತಾನು ಸಾಧನೆ ಮಾಡಿ ಅನ್ಯರಿಗೆ ಬೋಧನೆಯು
ಮಾಡಿದಾ ಗುಣದವರೆ ವೀರಪ್ಪಗೌಡ ।
ತನ್ನ ಪ್ರತಿಭೆಯ ತಾನು ಹೊರ ಹೊಮ್ಮಿ ಜನಕೆಲ್ಲ
ನೆನಪಿನಲಿ ನೆಲೆಯಾದ ವೀರಪ್ಪಗೌಡ ॥

ಬಡವನವ ತಾ ಬಂದು ನಿಲ್ಲಲವ ಮನೆ ಮುಂದು
ಒಳಗೆ ಕರೆದುಪಚರಿಸುವಾ ವೀರಪ್ಪಗೌಡ ।
ಮನ ಬಿಚ್ಚಿ ದಾನವನು ಮಾಡಿರುವ ಗೌಡರಲಿ
ಅಡಿಪಾಯವಾಗಿಹರು ವೀರಪ್ಪಗೌಡ ॥

ತನ್ನ ಹಿರಿಮೆಯನವರು ಆಡಿ ತೋರದವರೆಂದೂ
ತುಂಬಿದಾ ಕೊಡದಂತೆ ವೀರಪ್ಪಗೌಡ ।
ಒಳಗೊಂದು ಹೊರಗೊಂದು ಇಲ್ಲದವ ತಾನೆಂದು
ಎಲ್ಲರಿಗೂ ಅರಿತಿರುವ ವೀರಪ್ಪಗೌಡ ॥

ಮುತ್ತಿನಂತಾ ಪತ್ನಿ ಮತ್ತೆ ಹೋದಾಮೇಲೆ
ವಿಶ್ರಾಂತಿಯನೆ ಬಯಸಿದರು ವೀರಪ್ಪಗೌಡ
ಮೂರ್ತಿ ಕಿರಿದಾದರೂ ಕೀರ್ತಿ ಗಳಿಸಿದ ವ್ಯಕ್ತಿ

ಭಾರತಾಂಬೆಯ ಪುತ್ರ ವೀರಪ್ಪಗೌಡ ॥
ಕಾಲನಾ ಕರೆಕೇಳಿ ತೊರೆದಿಂದು ಬಂಧುಗಳ
ಮರೆಯಾದರೂ ನಮ್ಮ ವೀರಪ್ಪಗೌಡ
ಅನವರತವೂ ಕಾಯರ್‌ಮಾರ್ ವೀರಪ್ಪಗೌಡ

● **ಹೊದ್ದೆಟ್ಟೆ ಭವಾನಿಶಂಕರ್**
ಬೆಂಗಳೂರು.

ಗೌಡವತಿಯ ಗಮ್ಮತ್ತು

ಹೆಚ್ಚಿನ ನಮ್ಮ ಹುಡುಗಿಯರು ಪಿ. ಯು. ಸಿ. ಓದಿ **fail** ಆದವರೆ ಜಾಸ್ತಿ. ಇವರಿಗೆ ಮುಂದೆ ಏನು ಮಾಡುವುದು ಅಂತ ಯೋಚನೆ. ಅದರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಆಸೆ. ಈ ರೀತಿ ಒಂದು ಆಸೆಗೆ ಸಿಕ್ಕಿ ಹಾಕಿಕೊಂಡಿರುವ ಹುಡುಗಿ ಎಂದರೆ 'ಸೋನಿ ಗೂಡೆ', ಈ ಸೋನಿನ ಹಾಗೆ ತುಂಬಾ ಹುಡುಗಿಯರು ಅದೇ ವ್ಯಾಪಾರವನ್ನು ಬೇರೆ ಬೇರೆ ಜಾಗದಲ್ಲಿ ಹಾಕಿಕೊಂಡಿರುವರು. ಯಾವ ವ್ಯಾಪಾರ ಅಂತ ಗೊತ್ತಾ ! ಅದೇ "ಬ್ಯೂಟಿ ಪಾರ್ಲರ್" ಅದರ ಇನ್ನೊಂದು ಹೆಸರೇ "ಹಜಮನ ಅಂಗಡಿ."

ಹೀಗೆ ಸೋನಿನ ಹಾಗೇ, ಅವಳು, ಇವಳು, ಮತ್ತೊಬ್ಬಳು ಅಂತ ತುಂಬಾ ಹುಡುಗಿಯರು ಈ ವ್ಯಾಪಾರ **start** ಮಾಡಿದರು. ಈ ನಮ್ಮ ಹುಡುಗಿಯರು ಅವರ ಹದಿನೆಂಟು [18] ವಯಸ್ಸಿನಲ್ಲಿ ಸ್ಟೈಲ್ (**style**) ಗಾಗಿ, ಈ ವ್ಯಾಪಾರವನ್ನು ಸೋನಿನ ಸ್ನೇಹಿತೆ ಒಂದು ಹಜಮನ ಮಗಳು ಬೋಜಿನ ಉಪಾಯದ ಮೂಲಕ ಶುರು ಮಾಡಿದರು. ಪಾಪ, ಹಜಮತಿ ಈ ಉಪಾಯ ಬಿಟ್ಟರೆ ಬೇರೆ ಏನು ಉಪಾಯ ಕೊಡಲು ಸಾಧ್ಯ ಹೇಳಿ ? ಆದರೆ, ಗತ್ತಿನಲ್ಲಿ ಈ ಹುಡುಗಿಯರು ಮೆರೆದು ಮಜಮಾಡಿದರು. ಆದರೆ ಈ ಗತ್ತು ಎಲ್ಲಿಯವರೆಗೆ—

"ಐದು ವರ್ಷಗಳ ನಂತರ"

ಗತ್ತಿನಲ್ಲಿ ಓಡಾಡುತ್ತಿದ್ದ ಸೋನಿನಂತಹ ಹುಡುಗಿಯರ ವಯಸ್ಸು 23 ಆಯಿತು. ಅಂತಹ ಹುಡುಗಿಯರಿಗೆ ದಿನ ಕಳೆದ ಹಾಗೇ ಗಂಡು (**offer**) ಬರಲು ಶುರು ಆಯಿತು. ಯಾವ ಹುಡುಗರು ಹುಡುಗಿಯನ್ನು ಒಪ್ಪುತ್ತಿಲ್ಲ.

10ರಿಂದ 20 ಕಡೆಯವರು **offer** ಬಂದರು.

ಆಕಸ್ಮಾತ್ ಆಗಿ ನನಗೆ ಗೊತ್ತಿರುವ ಹುಡುಗರನ್ನು ಕೇಳಿದೆ.—ಏನಾಯಿತು ಹುಡುಗಿ ನೋಡಲು ಹೋದ ವಿಷಯ ಅಂತ : ಆಗ ಹುಡುಗ ಹೇಳಿದ :—

"ಗೂಡೆ ಬಾರೀ ಲಾಯಕ ಉಟ್ಟು
ದೇವ್ರು ಅವ್ಳ್‌ಗೆ ಎಲ್ಲ ಕೊಟ್ಟುಟ್ಟು,
ಆದರೆ ಭಾವ ! ಅವಳು ಗೌಡವತಿಯಾದರು,
ಹಜಮತಿಯಾಗಿ ಬಿಟ್ಟುಟಲ್ಲಾ."

● **ಜವಿ**, ಬೆಂಗಳೂರು.

ಗೌಡರ ವಿವಾಹ ಪದ್ಧತಿ

[ಹಿಂದಿನ ಸಂಚಿಕೆಯಿಂದ]

ಎಣ್ಣೆ ಅರಿಸಿಣ ಮಾಡುವುದು

ಇದು ವರನೇ ಆಗಲಿ, ವಧುವೇ ಆಗಲಿ ಕಾಸ್ತಾಳಿ/ಮುಹೂರ್ತ ಮಣೆ ಕಟ್ಟಿದ ನಂತರ ನೆಲ್ಲಕ್ಕಿ ಅಡಿಯಲ್ಲಿ ಎರಡು ಮಣೆಗಳನ್ನು ಇಟ್ಟು ಒಂದು ಮಣೆಯಲ್ಲಿ ವರ/ವಧುವನ್ನು ಕುಳ್ಳಿರಿಸಿ ಎದುರಿನ ಮಣೆಯಲ್ಲಿ ಒಂದು ಕಂಚಿನ ಬಟ್ಟಲಲ್ಲಿ ತೆಂಗಿನೆಣ್ಣೆ, ಅರಿಸಿಣ ಮಿಶ್ರ ಮಾಡಿದ ಮಿಶ್ರಣವನ್ನು ಗರಿಕೆ ಹುಲ್ಲಿನ ಕುಡಿಯೊಂದಿಗೆ 5 ಎಲೆ ಒಂದು ಅಡಿಕೆಯನ್ನು ಇಟ್ಟಿರುವರು. ಈಗ 5/7/9 ಮುತ್ತೈದೆಯರು ಜ್ಯೋತಿಗೆ ಅಕ್ಕಿ ಹಾಕಿ ಮೊದಲು ಎಲೆ ಅಡಿಕೆಯನ್ನೆತ್ತಿ ವರ/ವಧುವಿನ ಕೈಯಲ್ಲಿ ಕೊಟ್ಟು ಎಣ್ಣೆ ಅರಿಸಿಣದ ಮಿಶ್ರಣವನ್ನು ಗರಿಕೆ ಹುಲ್ಲಿನಿಂದ ಶೋಭಾನೆ ಹೇಳುತ್ತಾ ಮೈಗೆ ಲೇಪಿಸಿ ಉಜ್ಜುವರು. ಹೀಗೆ ಒಬ್ಬರು ಎಣ್ಣೆ ಅರಿಶಿಣದ ಶಾಸ್ತ್ರ ಮಾಡಿದ ನಂತರ ಕೈಯಲ್ಲಿ ಕೊಟ್ಟ ಎಲೆ ಅಡಿಕೆಯನ್ನು ಪುನಃ ಪಡೆದು ಕಂಚಿನ ತಟ್ಟೆಯಲ್ಲಿ ಇಡುವರು. ಹೀಗೆ ಒಬ್ಬರಾದ ನಂತರ ಒಬ್ಬರು 5/7/9ರ ಸಂಖ್ಯೆಯಲ್ಲಿ ಎಣ್ಣೆ ಅರಿಸಿಣ ಮಾಡಿ ಪುನಃ ಮೇಲ್ಕಟ್ಟಿನಡಿಯಲ್ಲಿಯೂ ಎಣ್ಣೆ ಅರಿಸಿಣ ಮಾಡುವ ಶಾಸ್ತ್ರವನ್ನು ಕೆಲವು ಕಡೆ ಮಾಡುವರು. ಎಣ್ಣೆ ಅರಿಸಿನ ಮಾಡುವಾಗ ಊರ ಅಕ್ಕಂದಿರಿಗೆ ಊರು ಗೌಡರು ಮುಖ್ಯಸ್ಥರು ಶೋಭಾನೆ ವೀಳ್ಯವೆಂದು ಕೊಡುವರು. ಎಣ್ಣೆ ಅರಿಸಿನ ಮಾಡುವುದಕ್ಕೆ ವರನನ್ನು/ವಧುವನ್ನು ಕೂರಿಸುವಾಗಲೂ ಮತ್ತು ಏಳಿಸುವಾಗಲೂ "ಹತ್ತು ಕುಟುಂಬ ಹದಿನೆಂಟು ಗೋತ್ರದ ಒಕ್ಕಣೆ ಹೇಳುವುದು."

ಮುಖ ಕ್ಷೌರ ಮಾಡುವುದು

ಈ ಹಿಂದೆ ಹೇಳಿದಂತೆ ವೀಳ್ಯಶಾಸ್ತ್ರದ ನಂತರ ಹುಡುಗನು ಮುಖ ಕ್ಷೌರ ಮಾಡಿರುವುದಿಲ್ಲ. ಮಾಡಬಾರದು ಎಂದು ಹಿಂದಿನಿಂದ ನಡೆದು ಬಂದಿರುವುದು. ಮೇಲ್ಕಟ್ಟಿನಡಿಯಲ್ಲಿ ಮಧುವಣ್ಣನನ್ನು ಕುಳ್ಳಿರಿಸಿ, ಕ್ಷೌರಿಕನಿಗೆ ಮರ್ಯಾದೆಯನ್ನು ಕೊಟ್ಟು, ಮುಖಕ್ಷೌರವನ್ನು ಮಾಡುವುದಕ್ಕೆ ಹೇಳಬೇಕು. ಕ್ಷೌರಿಕನು ಮುಖ ಕ್ಷೌರ ಮಾಡಿದ ನಂತರ ಅಡೋಳಿ ನಿಂತಿರುವ ಬಾವ ಮೈದುನರು ಮತ್ತು ಸ್ನೇಹಿತರು ಮಧುವಣ್ಣನನ್ನು ಸ್ನಾನ ಮಾಡಿಸುವುದಕ್ಕೆ ಕರೆದುಕೊಂಡು ಹೋಗುವರು. ಎಣ್ಣೆ ಅರಿಸಿಣ ಉಜ್ಜಿದ ಎಣ್ಣೆ ಜಿಡ್ಡನ್ನು ಬಾಳೆಹಣ್ಣು, ಸೀಗೆ ಕಾಯಿಪುಡಿ, ಸೋಪು ಉಪಯೋಗಿಸಿ ಸರಿಯಾಗಿ ಉಜ್ಜಿ ಬಿಸಿ ನೀರಿನಿಂದ ಸ್ನಾನ ಮಾಡಿಸುವರು. ಚೆನ್ನಾಗಿ ಸ್ನಾನವಾದ ನಂತರ ಎಣ್ಣೆ ಹಾಕಿ ತಲೆ ಬಾಚಿ ಜೋಡಿ ಪಂಚೆಯನ್ನು ಕಚ್ಚೆ ಹಾಕಿ ಉಡಿಸಿ, ಬಿಳಿ ಶರಟು ಮೇಲೆ ಬಿಳಿ ಕೋಟು ಅಡ್ಡಸಾಲು, ತಲೆಗೆ ಪೇಟ ಸುತ್ತಿ ಪೇಟದ ಮೇಲೆ ಮುಸುಕಿನ ವಸ್ತ್ರ, ಕೈಗೆ ಉಂಗುರ ಕುತ್ತಿಗೆಗೆ ಚಿನ್ನದ ಸರ, ಕೈಗೆ ಕಡಗವನ್ನು ಹಾಕುವರು. ಹೆಣ್ಣಿಗಾದರೆ ಅವಳಿಗೆ ಬೇಕಾದ ಶೃಂಗಾರ ಸಾಧನಗಳನ್ನು ಉಪಯೋಗಿಸುವರು. ಅಡೋಳಿಯು ಕೂಡಾ ಬಿಳಿ ಕೋಟು ಬಿಳಿ ಅಂಗಿ ಪೇಟ ಹಾಕಿ ವರನಿಗೆ ವಧುವಿಗೆ ಬಿಳಿ ಕೊಡೆಯನ್ನು ಹಿಡಿದಿರಬೇಕು. ಇಲ್ಲಿ ಕೆಲವು ಕಡೆ ಮಧುವಣ್ಣನ ಪೇಟದ ಸುತ್ತಿಗೆ "ಪಟ್ಟಬಾಸಿಂಗ"ವೆಂಬ ಒಂದು ಆಭರಣ ಸಾಧನವನ್ನು ಸುತ್ತಿ ಕಟ್ಟುವರು. ಸುಗಂಧ ಎಣ್ಣೆಗಳನ್ನು ಉಪಯೋಗಿಸುವರು. ಅಲ್ಲಿಂದ ಬಿಳಿ ಕೊಡೆಯನ್ನು ಅಡೋಳಿ ಹಿಡಿದು ವಾದ್ಯಗೋಷ್ಠಿಯೊಂದಿಗೆ ಹೊರಡುವರು. ಚಪ್ಪರದ ಮೇಲ್ಕಟ್ಟಿಡಿಗೆ ಬರುವುದಕ್ಕೆ ಮೊದಲು ಗಂಗೆ ಪೂಜೆ ಮಾಡಿ ಬರಬೇಕು.

ಗಂಗೆ ಪೂಜೆ

ಸ್ನಾನದ ನಂತರ ಹೊರಟು ವರನ/ವಧುವಿನ ಸಮೂಹ ಒಂದು ಫಲವೃಕ್ಷದಡಿಗೆ ಬಂದು ಅಲ್ಲಿ ಗಂಗೆ ಪೂಜೆಯನ್ನು ನೆರವೇರಿಸಿ ಬರುವುದು. ಮರದ ಅಡಿಯಲ್ಲಿ ಮಡಿವಾಳನು ಚಾಪೆ ಹಾಕಿ ಅದರ ಮೇಲೆ ಒಂದು ಮಡಿಯನ್ನು ಹಾಸಬೇಕು. ಅದರ ಮೇಲೆ 5 ಕುಡಿಬಾಳೆ ಎಲೆಯನ್ನು ಇಟ್ಟು, ಮೊದಲು ಗಣಪತಿಗೆ ಇಟ್ಟು, ನಂತರ ನೆನೆ ಹಾಕಿದ ಹಸಿ ಅಕ್ಕಿ, ಎಳ್ಳು, ಕಡಲೆ, ಬೆಲ್ಲ, ತೆಂಗಿನಕಾಯಿ ತುರಿ ಹಾಕಿ ಕಲಸಿದ ಪಂಚಕಜ್ಜಾಯವನ್ನು ಎಲ್ಲಾ ಎಲೆಗಳಿಗೂ ಬಳಸುವುದು. (ಇದು ವಧುವಾದರೆ ಅವಳೇ ಬಳಸುವುದು, ವರನಾದರೆ ಅವನ ಅಕ್ಕ–ತಂಗಿಯಂದಿರು ಮಾಡುತ್ತಾರೆ). ಎಲೆಗಳಿಗೆ ನೆಣೆ ಹೊತ್ತಿಸಿ, ಊದುಕಡ್ಡಿ ಹಚ್ಚಿ ಇಟ್ಟು ತೆಂಗಿನಕಾಯಿ ಒಡೆದು (ಗಣಪತಿಗೆ ಇಟ್ಟ ತೆಂಗಿನಕಾಯಿಯ ತೆಗೆಯಕೂಡದು) ಬಾಳೆಹಣ್ಣಿನ ತುದಿಭಾಗ ಸುಲಿದು ಇಟ್ಟ ಗಂಧಧೂಪ ಹೊಗೆ ಕೊಡುವುದು. ನಂತರ ವರ/ವಧುವು ಮರದ ಸಮೇತ ಹಾಕಿದ ಅಗಲಿಗೆ ಮೂರು ಸುತ್ತು ಬಂದು ಎಲೆಯನ್ನು ತೆಗೆದು ಅಲ್ಲಿಯೇ ನಿಂತಿರುವ ಗಂಡು ಮಗುವಿಗೆ ಮೊದಲು ಮತ್ತು ಹೆಣ್ಣು ಮಗುವಿಗೆ ಇನ್ನೊಂದು ಎಲೆಯನ್ನು ಕೊಟ್ಟು ಒಂದು ಎಲೆಯನ್ನು ಹರಿವ ನೀರಿಗೂ ಬೀಡುವುದು. ಎಲೆಗೆ ಬಳಸಿ ಉಳಿದ ಪಂಚಕಜ್ಜಾಯವನ್ನು ಎಲ್ಲರಿಗೂ ಪ್ರಸಾಧವಾಗಿ ಕೊಡುವುದು. ಅಲ್ಲಿಂದ ವಾದ್ಯದೊಂದಿಗೆ ಚಪ್ಪರದ ಮುಂಭಾಗದಲ್ಲಿ ಬಂದು ನಿಲ್ಲುವರು.

[ಮುಂದಿನ ಸಂಚಿಕೆ ನೋಡಿ]

ಕೃಪೆ :
ಗೌಡ ಸಂಸ್ಕೃತಿ ಕುಟುಂಬ ಕೈಪಿಡಿ

ಅದ್ದೂರಿಯ ಸುವರ್ಣ ಸ್ವಾತಂತ್ರ್ಯೋತ್ಸವ ಎಷ್ಟು ಅರ್ಥಪೂರ್ಣ ?

ನಾವಿಂದು 50ನೇ ಸ್ವಾತಂತ್ರ್ಯದ ಸುವರ್ಣ ವರ್ಷದಲ್ಲಿದ್ದೇವೆ. ಈ ಮಹಾ ಉತ್ಸವವನ್ನು ನಮ್ಮ ರಾಜಕೀಯ ಧುರೀಣರು, ಗಣ್ಯರು, ಸೇರಿದಂತೆ ನಮ್ಮ ಸರಕಾರ ಸಂಭ್ರಮ ಸಡಗರಗಳಿಂದ ಆಚರಿಸಿತು. ಆದರೆ ನಮಗೆ ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ನಾವು ಸಾಧಿಸಿದ್ದೇನು? ಇಂದಿನ ಅದ್ದೂರಿಯ ಆಚರಣೆಯ ಅರ್ಹತೆಯನ್ನು ನಾವು ಪಡೆದಿದ್ದೇವೆಯೇ?

ಪಟ್ಟಡ ಜಯಕುಮಾರ್ ಪುರುಶೋತ್ತಮ್, ಮದೆ

ಇಂದಿಗೂ ಸಹ ನಮ್ಮಲ್ಲಿ ಎಷ್ಟೋ ಜನ ವಸತಿಹೀನರಾಗಿ ಗಿಡ, ಮರ, ಮೋರಿಗಳ ಆಸರೆಯಲ್ಲಿ ಬವಣೆಯ ಬದುಕು ಸಾಗಿಸುತ್ತಿದ್ದಾರೆ. ಆಹಾರ, ನಿರುದ್ಯೋಗ, ಶಿಕ್ಷಣದ ಸಮಸ್ಯೆಗಳು ದಿನದಿಂದ ದಿನಕ್ಕೆ ಜಟಿಲವಾಗುತ್ತಾ ಜನರನ್ನು ಬಾಧಿಸುತ್ತಿವೆ. ಇಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿ ಸರಕಾರವು ಅದ್ದೂರಿಯ, ವಿಜೃಂಭಣೆಯ ದುಂದು ವೆಚ್ಚದ ಕಾರ್ಯಕ್ರಮವನ್ನು ನಡೆಸಿದ್ದು, 'ಇಲಿಗೆ ಪ್ರಾಣಸಂಕಟ, ಬೆಕ್ಕಿಗೆ ಚೆಲ್ಲಾಟ' ಎಂಬಂತಾಗಿ ಬಡವನ ಪರದಾಟವನ್ನು ಮುಗಿಲು ಮುಟ್ಟಿಸಿದೆ.

ಅಂದು ಅದೆಷ್ಟೋ ಜನ ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟು 1947 ಆಗಸ್ಟ್ 15 ರಂದು ಭಾರತವನ್ನು ಗುಲಾಮಗಿರಿಯಿಂದ ವಿಮುಕ್ತಗೊಳಿಸಿದರು. ಅದೆಷ್ಟೋ ದೇಶಪ್ರೇಮಿಗಳ ಕನಸಂದು ನನಸಾಗಿತ್ತು. ಅಂದು ಅವರ ಉದ್ದೇಶ ಒಂದೇ ಆಗಿತ್ತು. ಪರಕೀಯರ ದಾಸ್ಯದ ನೊಗವನ್ನು ಕಿತ್ತೊಗೆಯುವುದು. ಅದಕ್ಕಾಗಿ ಜಾತಿ, ಭಾಷೆ, ಪ್ರಾದೇಶಿಕತೆಗಳಿಂದ ಮುಕ್ತರಾಗಿ ಹೋರಾಟ, ತ್ಯಾಗ ಬಲಿದಾನಗಳ ಮುಖಾಂತರ ಸ್ವಾತಂತ್ರ್ಯದ ಫಲವನ್ನು ನಮಗೆಂದು ನೀಡಿದರು. ಆದರೆ ಅದು 'ಮಂಗನ ಕೈಗೆ ಮಾಣಿಕ್ಯ ಕೊಟ್ಟಂತಾಗುತ್ತದೆ ಎಂದು' ಅಂದಿನವರು ಕನಸಿನಲ್ಲೂ ಎಣಿಸಿರಲಿಲ್ಲ. ಅಂದರೆ ನಮ್ಮ ದೇಶದ ಸ್ಥಿತಿ ಗತಿಗಳನ್ನು ನಾವು ಅವಲೋಕಿಸಿದಾಗ ನಾವ್ಯಾರೂ ಸ್ವಾತಂತ್ರ್ಯವನ್ನು ಗಂಭೀರವಾಗಿ ಪರಿಗಣಿಸಲಿಲ್ಲ ಎಂಬುದು ಸುಸ್ಪಷ್ಟವಾಗುತ್ತದೆ.

ನಮ್ಮ ರಾಷ್ಟ್ರದ ಪ್ರಗತಿಯನ್ನು ಗಮನಿಸಿದರೆ ದೇಶ ಸ್ವಾವಲಂಬನೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿರುವುದನ್ನು ಕಾಣಬಹುದು. ಇಂದು ದೇಶವನ್ನು ಮತ್ತೆ ಪರದೇಶಿಗಳಿಗೆ ಒತ್ತೆಯಿಡುವ ಪ್ರಯತ್ನ ನಡೆಯುತ್ತಿದೆ. ಐವತ್ತು ವರ್ಷಗಳ ಹಿಂದೆ ವಿದೇಶಿಯರನ್ನು ದೇಶದಿಂದ ಹೊರ ಹಾಕುವುದಕ್ಕಾಗಿ ಪ್ರಾಣ ಪಣಕ್ಕಿಟ್ಟು ಹೋರಾಟ, ಐವತ್ತು ವರ್ಷಗಳ ಬಳಿಕ ಮತ್ತೆ ಅವರನ್ನು ಆಹ್ವಾನಿಸಿ ವಿಜೃಂಭಣೆಯ ಉತ್ಸವ! ಜನತೆಗೆ ಬೇಕಾಗುವ ಮೂಲ ಸೌಲಭ್ಯಗಳನ್ನೇ ಒದಗಿಸಲು ವಿಫಲವಾಗಿರುವ ಸರ್ಕಾರ ಇಂದು ಹುಟ್ಟುವ ಪ್ರತಿಯೊಬ್ಬ ಮಗುವಿನ ತಲೆಯ ಮೇಲೆ ಸುಮಾರು 3,000 ರೂ.ಗಳಷ್ಟು ಸಾಲದ ಹೊರೆಯನ್ನು ಹೊರಿಸುತ್ತಿದೆ. ನಿರೀಕ್ಷೆಗೂ ಮೀರಿ ಹೆಚ್ಚಾದ ಜನಸಂಖ್ಯೆ ಜನರನ್ನು ಪೌಷ್ಠಿಕತೆಯ ಆಹಾರದಿಂದ ವಂಚಿಸುತ್ತಿದೆ. ಎಲ್ಲೆ ಮೀರಿದ ನಿರುದ್ಯೋಗ, ದೇಶದ ಪ್ರತಿಭಾವಂತರನ್ನು ಸಹಜವಾಗಿಯೇ ಪರದೇಶಕ್ಕೆ ತಳ್ಳುತ್ತಿದೆ. ತೂಕದ ವ್ಯಕ್ತಿಗಳು ಅತ್ತ ಹೋಗಿ ಜಳ್ಳು ಮಾತ್ರ ಇಲ್ಲಿ ಉಳಿಯುವಂತಾಗಿದೆ.

ಒಂದೊಮ್ಮೆ ಸಂಪತ್ತು, ಕಲೆ, ಸಾಹಿತ್ಯ, ಸಂಸ್ಕೃತಿಗಳಿಗೆ ಹೆಸರುವಾಸಿಯಾದ ನಮ್ಮ ಭರತಖಂಡ ಇಂದು ಸಂಪೂರ್ಣವಾಗಿ ವಿದೇಶವನ್ನು ಅನುಕರಣೆ ಮಾಡ ಹೊರಟಂತಿದೆ. ಆದರೆ ಇದೇ ಸಂದರ್ಭದಲ್ಲಿ ಭಾರತೀಯ ಕಲೆಗೆ ಪಾಶ್ಚಾತ್ಯ ದೇಶಗಳಲ್ಲಿ ಪ್ರೋತ್ಸಾಹ ದೊರೆಯುತ್ತಿರುವುದು ಸಂತೋಷದ ವಿಷಯವಾದರೂ, ಅಮೂಲ್ಯವಾದುದನ್ನು ಬಿಟ್ಟುಕೊಟ್ಟು, ವಿನಾಶವನ್ನು ತಂದೊಡ್ಡುವ ಸಂಸ್ಕೃತಿಯ ಅನುಕರಣೆ ಎಷ್ಟು ಸರಿ ?

ಸ್ವಾತಂತ್ರ್ಯ ಬಂದಾಗಿನಿಂದ ಮೂಲಭೂತ ನಾಗರೀಕ ಸೌಲಭ್ಯಗಳು ನಿರ್ಲಕ್ಷಿಸಲ್ಪಟ್ಟಿವೆ. ದೇಶದೆಲ್ಲೆಡೆ ಕಾನೂನು ಸುವ್ಯವಸ್ಥೆಗಳು ಹದಗೆಟ್ಟಿವೆ. ಬೇಲಿಯೇ ಎದ್ದು ಹೊಲ ಮೇಯುವಂತೆ, ಉನ್ನತ ಸ್ಥಾನದಲ್ಲಿರುವ ರಾಜಕಾರಣಿಗಳು, ಅಧಿಕಾರಿಗಳು ಕೋಟಿಗಟ್ಟಲೆ ಹಗರಣ, ಲೂಟಿ, ಅತ್ಯಾಚಾರ, ದೊಂಬಿಗಳಲ್ಲಿ ತೊಡಗಿರುವುದು, ತಮ್ಮ ಪ್ರಭಾವವನ್ನು ಬಳಸಿ ಸುಲಭವಾಗಿ ಕಾನೂನಿನಿಂದ ತಪ್ಪಿಸಿಕೊಳ್ಳುವುದು, ವಿದ್ಯಾವಂತ ನಿರುದ್ಯೋಗಿಗಳೂ ಅದೇ ದಾರಿಯನ್ನು ಹಿಡಿಯುವಂತಾದುದು, ಇದು ನಮ್ಮ ದೇಶದ ಇಂದಿನ ನೈಜ ಚಿತ್ರಣವಾಗಿರುವಾಗ, ಇವರೆಲ್ಲರೂ ಸಾಮೂಹಿಕವಾಗಿ ಭಾರತವನ್ನು ವಿಶ್ವದಲ್ಲೇ ಪ್ರಥಮ ಹಗರಣ ರಾಷ್ಟ್ರವನ್ನಾಗಿ ಮಾಡಲು ಹೊರಟಂತಿದೆ. ಇದೆಲ್ಲವುಗಳಿಗಿಂತ ಮುಖ್ಯವಾಗಿ ಇಂದು ನಾವು ಎದುರಿಸುತ್ತಿರುವುದು ಜಾತೀವಾದ. ನಾವು ಜಾತ್ಯಾತೀತರು ಎಂದುಕೊಳ್ಳುತ್ತಾ 'ಜಾತ್ಯಾತೀತ ಜಾತಿ' ಎಂಬ ಹೊಸ ಜಾತಿಯನ್ನು ನಮ್ಮ ರಾಜಕೀಯ ಪಕ್ಷಗಳು ಹುಟ್ಟು ಹಾಕುತ್ತಿರುವಂತಿದೆ. ಇತ್ತೀಚೆಗೆ ರಾಷ್ಟ್ರಪತಿ ಚುನಾವಣೆಯಲ್ಲೂ 'ಜಾತಿ'ಯನ್ನೇ ಕೆಲವು ಮಾನ

(15 ನೇ ಪುಟ ನೋಡಿ)

ನಮ್ಮ ಸಂಸ್ಕೃತಿ, ಪ್ರತಿಭೆಗಳನ್ನು ಜಗತ್ತಿಗೆ ಸಾರುವೆವು

ಮೈಸೂರಿನ ಮಹಿಳಾ ಸಂಘಟನೆಯ ಘೋಷಣೆ

'ನಮ್ಮ ಜನಾಂಗವೇ ಇಂದು ಹಿಂದುಳಿದಿದೆ, ಅದರಲ್ಲೂ ಮಹಿಳೆಯರಂತೂ ಬೆರಳೆಣಿಕೆಯ ಮಂದಿ ಮಾತ್ರ ಮುನ್ನಡೆದಿದ್ದಾರೆ, ನಮ್ಮಲ್ಲಿರುವ ಅದೆಷ್ಟೋ ಯುವ ಪ್ರತಿಭೆಗಳು ಪರಿಸರದ ಇಕ್ಕಟ್ಟಿನಲ್ಲಿ ನಲುಗಿಹೋಗಿವೆ, ಆದರೆ ಇನ್ನು ಮುಂದೆ ಅದಕ್ಕೆ ಅವಕಾಶ ಕೊಡೆವು, ನಮ್ಮ ಸಂಸ್ಕೃತಿ, ಪ್ರತಿಭೆಗಳನ್ನು ಪೋಷಿಸಿ ಜಗತ್ತಿಗೆ ಸಾರುವೆವು' ಎಂದು ಮೈಸೂರಿನ ಮಹಿಳಾ ಸಂಘಟನೆಯ ನೇತಾರರು ಒಕ್ಕೊರಲಿನಿಂದ ಘೋಷಿಸಿದರು.

ಅರೆಭಾಷಿಕ ಜನಾಂಗದ ಮಹಿಳೆಯರ ಸಂಘಟನೆಯ ಕುರಿತು ಮುಕ್ತವಾಗಿ ಚರ್ಚಿಸಲು ಆಗಸ್ಟ್ 17 ರಂದು ಮೈಸೂರಿನ ಕೊಡಗು ಗೌಡ ವಿದ್ಯಾರ್ಥಿನಿಲಯದಲ್ಲಿ ವ್ಯವಸ್ಥೆಗೊಂಡಿದ್ದ ಸಮಾರಂಭದಲ್ಲಿ ಮೇಲಿನ ಘೋಷಣೆ ಮೊಳಗಿತು. ಸಮಾರಂಭದಲ್ಲಿ ಪಾಲ್ಗೊಂಡಿದ್ದ ಎಲ್ಲಾ ಮಹಿಳೆಯರಿಗೂ ಮುಕ್ತವಾಗಿ ಮಾತನಾಡುವ ಅವಕಾಶ ನೀಡಿದಾಗ, ಅವರ ಮನದೊಳಗೆ ಅದುಮಿಟ್ಟ ಭಾವನೆಗಳು ಸ್ಫೋಟಗೊಂಡವು. 'ನಮ್ಮಲ್ಲಿ ಪ್ರತಿಭಾವಂತರಿದ್ದೇವೆ, ಕಲಾಕಾರರಿದ್ದೇವೆ, ವಿದ್ಯಾವಂತರಾಗಿದ್ದೇವೆ, ಆದರೂ ಯಾವ ಕ್ಷೇತ್ರದಲ್ಲೂ ಮುಂದುವರಿಯದಿರಲು ಏನು ಕಾರಣ ? ನಮ್ಮಲ್ಲಿ ಸಂಕೋಚ, ಅಂತಸ್ತು, ಅಹಂಕಾರಗಳು ಮನೆಮಾಡಿಕೊಂಡಿವೆಯೇ ?' ಎಂದು ತಮ್ಮನ್ನೇ ಪ್ರಶ್ನಿಸಿಕೊಂಡರು.

ಇಂದು ನಮ್ಮ ಸಂಪ್ರದಾಯ ಪರಂಪರೆಗಳು ನಶಿಸಿ ಹೋಗುತ್ತಿರುವುದಕ್ಕೆ ಶೋಕಿಸಿದ ಸಭೆ, 'ಇನ್ನು ಮುಂದೆ ಅದಕ್ಕೆ ಅವಕಾಶ ನೀಡಬಾರದು, ನಮ್ಮ ಮಹಿಳೆಯರಿಗೆ ವಿವಿಧ ರೀತಿಯ ತರಬೇತಿಗಳನ್ನು ನೀಡೋಣ,ಪ್ರತಿಯೊಬ್ಬ ಮಹಿಳೆಯೂ ಸಂಕೋಚ ಬಿಟ್ಟು ವೇದಿಕೆಗೆ ಬರುವಂತೆ ಮಾರ್ಪಾಡು ಮಾಡೋಣ. ಈ ದಿಸೆಯಲ್ಲಿ ಯಾವುದೇ ಸಮಸ್ಯೆಗಳು ಎದುರಾದರೂ ಸವಾಲಾಗಿ ಸ್ವೀಕರಿಸೋಣ' ಎಂದು ಅಭಿಪ್ರಾಯಪಟ್ಟಿತು.

ಸಮಾರಂಭದಲ್ಲಿ ತಾತ್ಕಾಲಿಕ ಮಹಿಳಾ ಸಮಿತಿಯನ್ನು ರಚಿಸಲಾಯಿತು. ಕುಮಾರಿ ಚೆರಿಯಮನೆ ಧನುರವರು ಅಧ್ಯಕ್ಷೆಯಾಗಿ, ಕುಮಾರಿ ಗೀತಾ ಮೋಂಟಡ್ಕ ಕಾರ್ಯದರ್ಶಿಯಾಗಿ, ಶ್ರೀಮತಿ ಹೊಸೂರು ವಿಮಲ ಸೀತಾರಾಮ್‌ರವರು ಖಜಾಂಚಿಯಾಗಿ, ಕುಮಾರಿ ಓಡಿಯನ ಝಾನ್ಸಿಯವರು ಸಂಚಾಲಕಿಯಾಗಿ ಅವಿರೋಧವಾಗಿ ಆಯ್ಕೆಗೊಂಡರು. ನಂತರ ಈ ಸಮಿತಿಯು ಪ್ರತಿ ತಿಂಗಳ ಎರಡನೆ ಶನಿವಾರ ಸಂಜೆ 3 ಗಂಟೆಗೆ ಸಭೆ ಕರೆಯುತ್ತೇವೆಂದು ಆ ದಿವಸ ಹೆಚ್ಚಿನ ಮಹಿಳೆಯರು ಪಾಲ್ಗೊಳ್ಳಬೇಕೆಂದು ಕರೆ ನೀಡಿತು.

ಸಭೆಯ ಅಧ್ಯಕ್ಷತೆಯನ್ನು "ಕೊಡಗು ಸಂಗಾತಿ" ಪತ್ರಿಕೆಯ ಸಂಪಾದಕಿ ಶ್ರೀಮತಿ ಪಟ್ಟಡ ಶೀಲಾಮಣಿಯವರು ವಹಿಸಿದ್ದರು. ಗೀತಾ ಮೋಂಟಡ್ಕ ಪ್ರಾರ್ಥಿಸಿದರೆ, ಹೊಸೊಕ್ಲು ಹರಿಣಿ ಬೆಳ್ಯಪ್ಪ ಸ್ವಾಗತಿಸಿದರು. ಧನು ಚೆರಿಯಮನೆ ಸಭೆಯ ಉದ್ದೇಶ ವಿವರಿಸಿದರು. ಸಮಾರಂಭದಲ್ಲಿ ಹೊಸೂರು ವಿಮಲಾ ಸೀತಾರಾಮ್, ಅಮೆಮನೆ ಜಾಜಿ ಕೃಷ್ಣಪ್ಪ, ಹುಲಿಮನೆ ಗುಣಾವತಿ ರಮೇಶ್, ಪೋರೆಯನ ಯಶೋಧ ಆನಂದ, ಸೇರಿದಂತೆ ಹಲವಾರು ಮಂದಿ ಪಾಲ್ಗೊಂಡಿದ್ದರು. ಝಾನ್ಸಿ ಓಡಿಯನ ಇವರ ವಂದನಾರ್ಪಣೆಯೊಂದಿಗೆ ಸಮಾರಂಭಕ್ಕೆ ತೆರೆಕಂಡರೂ, ನಂತರ ಗೀತಾಮೋಂಟಡ್ಕರವರು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮ ನೆರೆದಿದ್ದ ಪ್ರೇಕ್ಷಕರ ಮನರಂಜಿಸಿತು.

● ಸಂಗಾತಿ ವರದಿಗಾರ

ಒಂದೇ ಉತ್ತರ

ಅಪರಿಚಿತನೊಬ್ಬ : ಇದು ಯಾವ ಊರು ?

ಮತ್ತೊಬ್ಬ ನೀನು ಕುಡಿಯುತ್ತಿರುವುದೇನು ?

ಬಾದಾಮಿ

ಕೊಡಗಿನಲ್ಲಿ ಪ್ರಸಿದ್ಧ ಹಬ್ಬ ಯಾವುದು ?

ಅಲ್ಲರಿ ನಿಮ್ಮ ಮೊಮ್ಮಗಳ ಹೆಸರೇನು ?

ಕಾವೇರಿ

ಅಮ್ಮ : ಅಪ್ಪ ಯಾಕೆ ಈ ದಿನ ಆಫೀಸಿಗೆ ಹೋಗಿಲ್ಲ?

ಅಡಿಗೆಯವಳು : ಒಲೆಯ ಮೇಲೆ ಏನಿಡಲಿ ಅಮ್ಮ ?

ಹಾಲಿಡೇ

● ಬಿ. ಸಿದ್ದರಾಜು
ಮದೆನಾಡು.

ಇರುವೆಗಳ ಮೂರ್ಖತನ

ಕೊಡಗಿನ ಗ್ರಾಮ ಪ್ರದೇಶಗಳಲ್ಲಿ ಹಲವಾರು ಬಗೆಯ ಜಾನಪದ ಕತೆಗಳು, ಅಜ್ಜಿ ಕತೆಗಳು ಪ್ರಚಲಿತದಲ್ಲಿದ್ದು ಅವು ಕೇಳುಗರ ಮನಸ್ಸಿಗೆ ಸಂತೋಷವುಂಟುಮಾಡುವುದರ ಜೊತೆಗೆ ನೀತಿಯನ್ನೂ ಒಳಗೊಂಡಿರುತ್ತವೆ. ಅಂತಹ ಅಜ್ಜಿಕತೆಗಳ ಪೈಕಿ ಇದೂ ಒಂದು.

ಇರುವೆಗಳು ಬಹಳ ಸಣ್ಣ ಜೀವಿಗಳು. ಅವು ಮನುಷ್ಯರ ಕಣ್ಣಿಗೆ ಬೀಳುವುದೇ ಕಷ್ಟ. ಮನುಷ್ಯ ಮತ್ತಿತರ ದೊಡ್ಡ ಪ್ರಾಣಿಗಳು ಓಡಾಡುವಾಗ ಅವುಗಳ ಕಾಲುಗಳೆಡೆಯಲ್ಲಿ ಸಿಲುಕಿ ನಜ್ಜುಗುಜ್ಜಾಗುವ ದುರ್ದೈವಿಗಳು.

ಇರುವೆಗಳು ಮನುಷ್ಯರ ಮೈಮೇಲೆ ಹತ್ತಿದಾಗ ಇಲ್ಲವೇ ಹತ್ತಿ ಕಚ್ಚಿದಾಗ ಮನುಷ್ಯ ಅವುಗಳನ್ನು ಹಿಸುಕಿ ಹೊರಕ್ಕೆ ಎಸೆಯುತ್ತಾನೆ. ಇದರಿಂದ ನೊಂದ ಇರುವೆಗಳು ಮನುಷ್ಯನಿಗೆ ಹೇಗಾದರೂ ಮಾಡಿ ಬುದ್ಧಿ ಕಲಿಸಬೇಕೆಂದು ನಿಶ್ಚಯಿಸಿದವು. ಎಲ್ಲಾ ಇರುವೆಗಳು ಒಂದು ಕಡೆ ಸೇರಿ ಈ ಬಗ್ಗೆ ಚರ್ಚೆ ನಡೆಸಿ ತೀರ್ಮಾನವೊಂದನ್ನು ತೆಗೆದುಕೊಂಡವು. ಅವುಗಳ ತೀರ್ಮಾನವೆಂದರೆ, ದೀರ್ಘ ತಪಸ್ಸು ಮಾಡಿ ದೇವರನ್ನು ಒಲಿಸಿಕೊಂಡು, ಮನುಷ್ಯರಿಗೆ ತೊಂದರೆಯುಂಟುಮಾಡುವಂತ ವರ ಬೇಡುವುದು.

ತೆಗೆದುಕೊಂಡ ತೀರ್ಮಾನದಂತೆ ಇರುವೆಗಳು ಒಂದೆಡೆ ಸೇರಿ ದೀರ್ಘವಾದ ತಪಸ್ಸು ನಡೆಸಿದವು. ಇರುವೆಗಳ ತಪಸ್ಸಿಗೆ ಮೆಚ್ಚಿ ದೇವರು ಪ್ರತ್ಯಕ್ಷನಾಗಿ ಏನು ವರ ಬೇಕೆಂದು ಕೇಳಿದಾಗ ಇರುವೆಗಳು–"ಭಗವಂತ, ನಾವು ಕಚ್ಚಿದರೆ ಸಾಯುವಂತೆ ವರ ಕೊಡು" ಎಂದು ಕೇಳಿಕೊಂಡವು. ದೇವರು ನಗುತ್ತಾ 'ಹಾಗೇ ಆಗಲಿ' ಎಂದ. ಇರುವೆಗಳಿಗೆಲ್ಲಾ ಬಹಳ ಸಂತೋಷವಾಯಿತು. ಇನ್ನು ನಾವು ಕಚ್ಚಿದರೆ ಮನುಷ್ಯನ ಸಾವು ನಿಶ್ಚಿತ ಎಂದುಕೊಂಡು ಬಹಳ ಹರುಷಗೊಂಡವು.

ದೇವರ ವರ ಸಿಕ್ಕಿದ ಅಹಂಕಾರದಿಂದ ಇರುವೆಗಳೆಲ್ಲಾ ಸೇರಿಕೊಂಡು ಸಿಕ್ಕ ಸಿಕ್ಕಿದ ಮನುಷ್ಯರನ್ನೆಲ್ಲಾ ಕಚ್ಚಲು ತೊಡಗಿದವು. ಮನುಷ್ಯರೇನು ಸುಮ್ಮನೆ ಕುಳಿತುಕೊಳ್ಳುವ ಪ್ರಾಣಿಗಳೇ ? ಪಟಪಟನೆ ಹೊಡೆದು ಕಚ್ಚುತ್ತಿದ್ದ ಇರುವೆಗಳನ್ನೆಲ್ಲಾ ಸಾಯಿಸಿದರು. ಇನ್ನುಳಿದ ಇರುವೆಗಳು ಜೀವವುಳಿಸಿಕೊಂಡು ದೇವರ ಬಳಿ ಹೋಗಿ–"ಭಗವಂತ, ನೀನು ಮೋಸಗಾರ ನೀನು ಕೊಟ್ಟ ವರ ಫಲಿಸಲೇ ಇಲ್ಲ." ಎಂದು ದೂರಿಕೊಂಡವು. ದೇವರು ಮುಗುಳ್ನಗುತ್ತಾ–"ಇರುವೆಗಳೇ, ನಾನು ನೀವು ಕೇಳಿದಂತೆ ವರ ನೀಡಿದ್ದೇನೆ ಮತ್ತು ನಾನು ಕೊಟ್ಟ ವರ ಫಲಿಸಿದೆ" ಎಂದ. ಇರುವೆಗಳು ಅದು ಹೇಗೆ ಸಾಧ್ಯ ಎಂದು ಪ್ರಶ್ನಿಸಿದಾಗ ದೇವರು, "ನೀವು, 'ನಾವು ಕಚ್ಚಿದರೆ ಸಾಯಬೇಕು' ಎಂಬ ವರ ಕೇಳಿದ್ದೀರಿ. 'ನಾವು ಕಚ್ಚಿದರೆ ಮನುಷ್ಯರು ಸಾಯಬೇಕು' ಎಂಬ ವರವನ್ನು ಕೇಳಿರಲಿಲ್ಲ. 'ನಾವು ಕಚ್ಚಿದರೆ ಸಾಯಬೇಕು' ಎಂದರೆ 'ನೀವೇ ಸಾಯಬೇಕು' ಎಂದರ್ಥವಲ್ಲವೇ ? ಎಂದು ಮರುಪ್ರಶ್ನೆ ಹಾಕಿದನು.

ಇರುವೆಗಳಿಗೆ ತಮ್ಮ ಮೂರ್ಖತನದ ಅರಿವಾಗಿ ನಾಚಿಕೆಪಟ್ಟುಕೊಂಡವು. ಅಂದಿನಿಂದ ಅನಾವಶ್ಯಕವಾಗಿ ಮನುಷ್ಯನಿಗೆ ತೊಂದರೆ ಕೊಡುವ ಮೂರ್ಖತನ ಮಾಡಲಿಲ್ಲ.

"ಮಾತನಾಡುವಾಗ ಬಹಳ ಜಾಗ್ರತೆ ವಹಿಸಬೇಕು ಎನ್ನುವುದೇ ಈ ಕತೆಯಲ್ಲಡಗಿರುವ ನೀತಿ.

● ಬೈತಡ್ಕ ಕೆ. ಶ್ರೀಧರ್
ಪಾಲೂರು, ಕೊಡಗು.

(13ನೇ ಪುಟದಿಂದ ಮುಂದುವರೆದಿದೆ)

ಸ್ವಾತಂತ್ರ್ಯೋತ್ಸವ ಎಷ್ಟು ಅರ್ಥಪೂರ್ಣ ?

ದಂಡ ಮಾಡಿದ್ದು, ನಮ್ಮ ದೇಶದ ದುರಂತವಲ್ಲದೆ ಮತ್ತೇನು ?

ಸ್ವತಂತ್ರ ಭಾರತದಲ್ಲಿ ನಾವಿಂದು ಸಾಧಿಸಿದ್ದೇನು ? ಮುಂದೆ ಸಾಧಿಸಬೇಕಾದ್ದೇನು ? ಎಂಬುವನ್ನು ನಾವು ಯೋಚನೆ ಮಾಡಬೇಕು. ಸ್ವಾತಂತ್ರ್ಯ ಬಂದು 50 ವರ್ಷಗಳಾಯಿತು ಎಂದು ಹೆಮ್ಮೆಯಿಂದ ನಗೆ ಬೀರುವ ನಾವು ನೂತನ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡು ನಿಗದಿ ಅವಧಿಯಲ್ಲಿ ಪೂರ್ಣಗೊಳಿಸಿ ಪ್ರಗತಿ ಪಥದತ್ತ ಕಾಲಿಡಬೇಕಾಗಿದೆ. ನಾವು ದೇಶದ ಪ್ರಗತಿಯ ಬಗ್ಗೆ ಚಿಂತಿಸದಿದ್ದಲ್ಲಿ ಯಾವ ಸಂಭ್ರಮಕ್ಕೂ ಅರ್ಥವಿಲ್ಲ.

ಕೊಡಗು ಸಂಗಾತಿ ಪತ್ರಿಕೆಗೆ ಇಂದೇ
ಚಂದದಾರರಾಗಿ ಸಹಕರಿಸಿ

ನಿಮ್ಮ ಪತ್ರಗಳು

ಗೌಡಾಳ್ವಿಕೆಯ ಮೂಲ

ಮಾನ್ಯರೆ

ಕೊಡಗು ಸಂಗಾತಿ ಪತ್ರಿಕೆಯು ತಲುಪಿತು. ಸಂಪಾದಕೀಯವನ್ನು ಓದಿದೆನು. ಬಹಳ ಚೆನ್ನಾಗಿ, ಅರ್ಥವತ್ತಾಗಿ ಬರೆದಿರುತ್ತೀರಿ. ಆದರೆ ದಕ್ಷಿಣ ಭಾರತವನ್ನು 2, 3, 4 ಶತಮಾನದಲ್ಲಿ ಆಳಿದ ಜನಾಂಗವನ್ನೇ ಬಿಟ್ಟಿದ್ದೀರಿ. ಅದೂ ಅಲ್ಲದೆ ಕೊಡಗು ನಾಡನ್ನು ಒಳಗೊಂಡು ಆಳಿದ ಇತಿಹಾಸವಿದೆ. ಕೊಡಗಿನ ಕಾಫಿ ತೋಟದಲ್ಲಿಯೇ ಗಂಗರ ವಿಗ್ರಹವು ಸಿಕ್ಕಿರುವುದನ್ನು ಇತಿಹಾಸಕಾರರು ಗುರುತಿಸಿರುತ್ತಾರೆ. ಇನ್ನೂ ಅನೇಕ ಅಂಶಗಳನ್ನು ಗುರುತಿಸಿ ಇತಿಹಾಸದ ಪುಟಗಳಲ್ಲಿ ನಮೂದಿಸಿರುತ್ತಾರೆ. ಗಂಗರು ಸಹ ಗೌಡ ಜನಾಂಗಕ್ಕೆ ಸೇರಿದ ಬೆಳ್ಳಾಳ ಅಥವಾ ವೆಳ್ಳಾಳ ವಕ್ಕಲಿಗರ ಪಂಗಡಕ್ಕೆ ಸೇರಿದವರು. ಆದುದರಿಂದ ಮೇಲ್ಕಂಡ ಪಂಗಡದವರನ್ನೂ ತಾವು ಗೌಡರ ಬಗ್ಗೆ ಬರೆಯುವಾಗ ಸೇರಿಸಿಕೊಂಡು ವಿವರಣೆಯನ್ನು ಬರೆಯಬೇಕೆಂದು ವಿನಂತಿಸುತ್ತೇನೆ. ಗಂಗರು ದಕ್ಷಿಣ ಭಾರತವನ್ನು ಆಳಿದ ರಾಜಮನೆತನಗಳೆಲ್ಲರಿಗಿಂತ ಅತಿ ಹೆಚ್ಚಿನ ಕಾಲ ಆಡಳಿತ ಮಾಡಿರುತ್ತಾರೆ. ಅಲ್ಲದೆ ದಕ್ಷಿಣ ಭಾರತದಲ್ಲಿ ಆಡಳಿತ ಮಾಡಿದ ರಾಜ ಮನೆತನಗಳೆಲ್ಲರಿಗೂ ಒತ್ತುಕೊಟ್ಟು ಪ್ರಸಿದ್ಧರಾಗಿರುವರು, ಅಲ್ಲದೆ ಕೆಲವು ರಾಜಮನೆತನಗಳ ಜೊತೆ ವೈವಾಹಿಕ ಸಂಬಂಧ [ರಕ್ತ ಸಂಬಂಧ] ಇಟ್ಟುಕೊಂಡು ಆಡಳಿತ ಮಾಡಿದ ರಾಜವಂಶ ಇವರದು. ಆದುದರಿಂದ ದಯಮಾಡಿ ವಿಮರ್ಶೆಮಾಡಿ ಸೇರಿಸುವುದಾದರೆ ಸೇರಿಸಿಕೊಂಡು ಮುಂದುವರಿಯಿರಿ ಮತ್ತು ನಮಗೂ ಸಹ ಮಾರ್ಗದರ್ಶನ ಮಾಡಬೇಕೆಂದು ವಿನಂತಿಸುತ್ತೇನೆ. ಈಗಾಗಲೇ [ಗಂಗರು] ಬೆಳ್ಳಾಳ ; ವೆಳ್ಳಾಳ ವಕ್ಕಲಿಗರ ಬಗ್ಗೆ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥಸ್ವಾಮಿಜೀಗಳವರಿಗೆ ಕಳುಹಿಸಿದ ವಿವರಣೆಯನ್ನು ಸಹ ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ತಾವು ಪರಿಶೀಲಿಸಿ, ಇತಿಹಾಸಕಾರರು ಪರಕೀಯರಾದರೂ ವಿಚಾರಗಳನ್ನು ದೀರ್ಘವಾಗಿ ವಿಚಾರ ಮಾಡಿ ಬರೆದಿರುತ್ತಾರೆ. ಆದರೂ ಸಹ ಸ್ಥಳೀಯರ ಪರಿಸ್ಥಿತಿಯ ಒತ್ತಡವೋ ಏನೋ ಅಥವಾ ಇಲ್ಲಿಯ ಇತಿಹಾಸಕಾರರ ಮತ್ತು ರಾಜಕೀಯ ಒತ್ತಡ ವರ್ಣಭೇದದ ಸಂಕುಚಿತ ಭಾವನೆ, ಅಲ್ಲದೆ, ಅಂದಿನ ಕಾಲದ ರಾಜ ಮನೆತನದ ಇತಿಹಾಸವನ್ನು ಬರೆಯುತ್ತಿದ್ದ ಜನರಿಗೆ ಆಗಿನ ಕಾಲದ ಸನ್ನಿವೇಶಕ್ಕೆ, ಸಂದರ್ಭಕ್ಕೆ ಮಣಿದು ಯಾವ ರಾಜವಂಶಕ್ಕೂ ಖಚಿತವಾದ ತೀರ್ಮಾನ ತೆಗೆದುಕೊಂಡಿಲ್ಲ. ಒಬ್ಬರು ಮತ್ತೊಬ್ಬರನ್ನು ತೆಗಳಿ, ಚರ್ಚಿಸಿ, ಖಂಡಿಸಿ ಒಮ್ಮತಕ್ಕೆ ಬಾರದೆ, ತಮ್ಮ ತಮ್ಮ ಪ್ರೌಢಮೆಯನ್ನು ತೋರಿಸಿಕೊಂಡು ಮುಖ್ಯವಾದ ಕೆಲವು ವಿಷಯಗಳನ್ನು ಸಂಶಯಾಸ್ಪದವಾಗಿ ಬರೆದು ಇಟ್ಟುಹೋಗಿದ್ದಾರೆ. ಅಲ್ಲದೆ ಕೆಲವು ಶಾಸನಗಳ ಲಿಪಿಯನ್ನು ಲಂಡನ್ ಮತ್ತು ಸ್ವಿಡ್ಜರ್‌ಲಾಂಡ್ ವಸ್ತು ಪ್ರದರ್ಶನದಲ್ಲಿದೆ ಎಂದು ಬರೆದಿರುತ್ತಾರೆ. ಈ ರೀತಿ ಗಂಗರ ವಿಚಾರವನ್ನು ಒಗಟನ್ನಾಗಿಯೇ ಮಾಡಿ ಇಟ್ಟಿರುತ್ತಾರೆ. ಹಿಂದಿನ ಕೆಲವು ಗ್ರಂಥಕರ್ತರು ಗಂಗರ ವಿವರಣೆಯನ್ನು ಬರೆದಿರುತ್ತಾರೆ. ಅದನ್ನು ಅಧ್ಯಯನ ಮಾಡುತ್ತಿದ್ದೇನೆ. ಮುಗಿದ ನಂತರ ವಿವರಣೆ ಕಳುಹಿಸುತ್ತೇನೆ. ದಕ್ಷಿಣ ಭಾರತವನ್ನು ಆಳಿ ಆಡಳಿತ ಮಾಡಿದವರು ಗಂಗರು ಬೆಳ್ಳಾಳ : ವೆಳ್ಳಾಳ ವಕ್ಕಲಿನವರೆಂದು ದೃಢಪಟ್ಟಿರುತ್ತದೆ.

ತಮ್ಮ ಸಂಪಾದಕೀಯದಲ್ಲಿ ಕೊಂಗಾಳ್ವರರು, ಚೆಂಗಾಳ್ವರರು ಗಂಗರ ಮನೆತನಗಳ ಬಗ್ಗೆ ವಿವರಣೆ ಮಾಡಿಲ್ಲವಾದ್ದರಿಂದ ದಯವಿಟ್ಟು ಈ ಬಗ್ಗೆ ಬೆಳಕು ಚೆಲ್ಲಿ ನಮ್ಮ ಜನಾಂಗದ ತಿಳುವಳಿಕೆಗೆ ಅನುವಾಗಲಿ ಎಂಬುದಾಗಿ ಆಶಿಸುತ್ತೇನೆ.

ಟಿ. ಆರ್. ಮುದ್ದೇಗೌಡ
ಸಂಸ್ಥಾಪನಾಧ್ಯಕ್ಷರು
ತಲಕಾಡು ಗಂಗವಂಶ ಸ್ಥಾಪಕ ಕೊಂಗಣಿವರ್ಮ ಬೆಳ್ಳಾಳ [ವೆಳ್ಳಾಳ] ಒಕ್ಕಲಿಗರ ಟ್ರಸ್ಟ್ (ರಿ) ಮೈಸೂರು.
ನಂ. 3, 2ನೇ ಮುಖ್ಯ ರಸ್ತೆ, ಯಾದವಗಿರಿ, ಮೈಸೂರು–20

ಮೆಚ್ಚುಗೆಗೆ ಪಾತ್ರವಾಗಲಿ

ಮಾನ್ಯರೆ

ಕೊಡಗು ಸಂಗಾತಿ ಮನೆ ಮನೆಗಳಲ್ಲಿ ಬಾಳಿ ಬೆಳಗಲಿ, ಕೊಡಗು ಮತ್ತು ದಕ್ಷಿಣ ಕನ್ನಡ ಗೌಡರುಗಳ ಹಳೆ ಸಂಪ್ರದಾಯಗಳನ್ನು ಸಂಗ್ರಹಿಸಿ ಪ್ರಕಟ ಪಡಿಸಲಿ, ಕೊಡಗು ಗೌಡರ ಹಳೆ ಸಂಪ್ರದಾಯದಿಂದ ಹಿಡಿದು ಗೌಡರು ಕೊಡಗಿಗೆ ಬಂದ ಬಗ್ಗೆ ಸಂಗ್ರಹಿಸಿ ಪ್ರಕಟ ಪಡಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಲಿ ಎಂದು ಹಾರೈಸುತ್ತೇನೆ.

● **ತಡಿಯಪ್ಪನ ಪೂವಯ್ಯ ಬಸಪ್ಪ**
ಮೈಸೂರು.

ತಲೆಗೆ ಬಿದ್ದ ನೀರ್ ಕಾಲಿಗೆ ಬೀಳದೆ ಇರುದಾ ?

ಅರೆ ಭಾಷಿಕ ವಿಭಾಗ

ನಾವ್ ಎಷ್ಟೇ ತಲೆಕುತ್ತಿ ಲಾಗ ಹಾಕಿರೂ ಶಾಶ್ವತವಾಗಿರಿಕಾದುಲೆ. ಸಾವುಂ ತೇಳ್ದ್ದ ಪ್ರತಿಯೊಬ್ಬಂಗೂ ಕಟ್ಟೆ ಇಸಿದ ಬುತ್ತಿ. ಈ ವಿಷಯ ಗೊತ್ತಿದ್ದೂ ಗೊತ್ತಿದ್ದೂ ನಾವ್ ಹೆಂಗೊಳೊ ? ಅಂವನ್ನ ಕಂಡ್ರೆ ಇಂವಂಗಾದುಲೆ, ಇಂವನ್ನ ಕಂಡ್ರೆ ಅಂವಂಗಾದುಲೆ. ಮನಸೊಳಗೆಲ್ಲಾ ರೇಸಿ ತುಂಬಿಕಂಡಂಗೆ ಇರೋವು ನಾವ್. ಒಬ್ಬ ಏನಾರ್ ಮೇಲೆ ಬಾತ್‌ತೇಳಿರೆ ಅವನ

ಬಿ. ಆರ್. ಜೋಯಪ್ಪ, ಮಡೆ

ಚೆಗ್‌ರ್ನ ಮುರಿಯೋಕುಂತ ಗ್ಯಾನ ಮಾಡಿವೆ. ತಾನೂ ಕೊಚ್ಚೆಗುಂಡಿಲಿ, ಅವನೂ ಕೊಚ್ಚೆ ಗುಂಡಿಲೇ ಇರೋಕುತ ಗ್ಯಾನ ಮಾಡುವ ಜನಗನಾವ್.

ಒಂದ್ ಕೈಂದ ಚಪ್ಪಾಳೆ ತಟ್ಟೆಕಾದುಲೆ. ಅದೇ ರೀತಿ ಒಬ್ಬನೇ ಬದುಕುದು ಕಷ್ಟ. ಅವನೊಟ್ಟಗೆ ಇನ್ನೊಬ್ಬ ಬೇಕ್. ಸಾವಾರ್ರ್ ವರ್ಷಗಳ ಹಿಂದೆ ಅರಿಸ್ಟಾಟಲ್. ತೇಳುವ ತತ್ವಜ್ಞಾನಿ ಏನ್ ಹೇಳಿಟ್ಟು ಗೊತ್ತುಟಾ? "ಮಾನವ ಸಂಘ ಜೀವಿ" ಈ ಮಾತ್ ಸತ್ಯತಾನೆ? ನಮ್ಮ ಸಮಾಜದ ಅತ್ಯಂತ ಸಣ್ಣ ಘಟಕ ಕುಟುಂಬ. ಇಂದ್ ಯಾವ ಕುಟುಂಬ ಸರಿಯಾಗುಟ್ಟು ? ಒಂದೇ ತೊಟ್ಟಿಗ್‌ಲ್‌ಲಿ ಮಲಗಿ, ಒಂದೇ ಬುಟ್ಲಲಿ ಉಂಡ್, ಒಂದೇ ರೊಟ್ಟಿನ ನಾಕ್ ಕೀಂತ್ ಮಾಡಿಕಂಡ್ ತಿಂದ ಮಕ್ಕ ದೊಡ್ಡವು ಆದಂಗೆ ಆದಂಗೆ ದೂರ ದೂರ ತುಂಬಾ ದೂರಾಗಿಬುಟ್ಟನೆ. ದೂರಾದರೂ ಆಗಲಿ. ಆದರೆ ಹೊಟ್ಟೆಲಿ ಕಿಚ್ ತುಂಬಿ ಕಂಡೀ 'ಹೆಂಗಾರ್ ಮಾಡಿ ಅವನ ಹಾಳ್ ಮಾಡೋಕುಂತೇಳುವ ಹಠ ತೊಟ್ಟನೆ. ಈ ಥರ ಯಾಕಾತ್‌ತೇ ಗೊತ್ತಾಗ್ತ ಇಲ್ಲೆ. "ಒಂದೇ ಮರದ ಹಣ್ಣುಗಳೆಲ್ಲಾ ಒಂದೇ ಥರಾ ಎಲ್ಲಾ" ಒಂದೇ ಮನೆಯ ಮಕ್ಕಳೆಲ್ಲಾ ಒಂದೇ ಥರಾ ಇಲ್ಲಾ"—ಅದೇನಾ ಕೇಳ್ದ್ದ ಯಾಕೆ ಒಂದೇ ಥರಾ ಇಲ್ಲೆತಾ ?

ನಾವು ಪ್ರೀತಿ ಮಾಡುದ್‌ನ ಕಲಿಯಕೆ ಮುಂದೆ ದ್ವೇಷ ಮಾಡ್ದು ಹೆಂಗೆಂತ ಕಲ್ತವೆ. ಅಪ್ಪ ಅವ್ವನ ಮೂಲೆಗೆ ನೂಕಿ ಬೇಕಾರೆ ಬೇಯಿಸಿ ಕಂಡ್ ತಿನ್ನಿ. ಇಲ್ಲರೆ ಸಾಯೆನಿಂತ ಹೇಳುವೆ. ಇದ್ ಅನ್ಯಾಯ. ತಲೆಗೆ ಬಿದ್ದ ನೀರ್ ಕಾಲಿಗೆ ಬೀಳದೆ ಇರುದಾ ? ಇಂದ್ ಅಪ್ಪ ಅವ್ವನ ದೂರ ಮಾಡ್ದವಂಗೆ ನಾಳೆ ತನ್ನ ಮಕ್ಕಳೂ ಅದೇ ರೀತಿ ಮಾಡದೆ ಇರಿಕಿಲೆಂತ ಪ್ರತಿಯೊಬ್ಬನೂ ಮನ್ಸಲಿ ಇಸಿಕಣೋಕು. ನಾವ್ ಇಂದ್ ಎಲ್ಲಿಯೋ ತಪ್ಪಿಯೊಳೊ. ನಮ್ಮ ಕುಟುಂಬ ಜೀವನದ ಪ್ರೀತಿಯ ಕೊಂಡಿ ಎಲ್ಲೋ ಬುಟ್ಹೋಗುಟು. ಆ ಕೊಂಡಿನ ಕೂಡ್ಸುವ ಕೆಲ್ಸ ಈಗ ಅರ್ಜೆಂಟಾಗಿ ಆಕು.

ನಾವ್ ಇರುವಷ್ಟು ದಿನ ನಗಾಡಿಕಂಡ್ ಬದುಕೋಕು. ಆಗ ಆ ಬದುಕಿಗೊಂದು ಅರ್ಥ ಬಂದದೆ. ಗೋಮುಖ ವ್ಯಾಘ್ರ ಅಂದರೆ ಹಸುನ ಥರ ಸಾಧುಮುಖ, ಮನಸ್ಸು ಹುಲಿಯಷ್ಟು ಕ್ರೂರ—ಆದು ಬ್ಯಾಡ. ಈ ಮನುಷ್ಯ ಜೀವನ ನಾವ್‌ಗೆ ಸಿಕ್ಕಿದ್ದೊಂದು ಆಕಸ್ಮಿಕ. ಈ ಅಮೂಲ್ಯ ಜೀವನ ಸುಖಲಿ ಕಳಿಯೊನೊ. ಉರಿ ಬಂದ್ ನೆಗ್ದ್ ಬೀತ್‌ಂತ ಜನ ಹೇಳಿ ಕಂಬೊದು ಬ್ಯಾಡ. ಮಾನ್ಯ ಓದುಗ ರಾದ ನೀವ್ ಈ ಬಗ್ಗೆ ಸೊಲ್ಪ ಗ್ಯಾನ ಮಾಡಿ.

ಅತ್ತೆ ಮೇಲೆ ಸಿಟ್ಟು ಕೊತ್ತಿ ಮೇಲ

ಒಂದು ಮನೆಲಿ ಅತ್ತೆ ಮತ್ತೆ ಸೊಸೆ ಇದ್ದವೆ. ಅತ್ತೆಯಾಗೋಳು ಸೊಸೆಗೆ ತುಂಬಾ ಕಷ್ಟ ಕೊಟ್ಟದೆ. ಸೊಸೆಗೆ ಒಂದೂ ದಿನ ಬೈಗುಳ ತಪ್ಪುದುಲೆ. ಸೊಸೆ ಮಾತ್ರ ಅತ್ತೆಗೆ ಎದುರುತ್ತರ ಕೊಡ್ದುಲೆ. ಅವಳು ಬೈದರು ಸುಮ್ಮನೆ ಆಗಿ ಬುಟ್ಟದ್ದೆ. ಆದರೆ ಆ ಸೊಸೆ ಎಷ್ಟು ದಿನಾತ ಹಿಂಗೆನ್ನೇ ಬೈಗಳ ತಿಂಬಕ್ಕು. ನೀವೇ ಹೇಳಿ.

ಒಂದು ದಿನ ಅತ್ತೆ ಸುಮ್ಮನೆ ಬೈದದ್ದೇ ಸೊಸೆಗೆ ತುಂಬಾ ಸಿಟ್ಟು ಬಂದ್‌ಬುಡ್ತು ಅತ್ತೆಗೆ ಹೊಡಿಯಕೆ ಮತ್ತೆ ಬೈಯಕ್ಕಂತು ಆಮೇಲೆತ ಹೇಳಿಕಂಡ್ ಅಡಿಗೆ ಮನೆ ಕಡೆ ಹೋತ್. ಅಲ್ಲಿ ಕೊತ್ತಿ ಮರಿ ಓಡಾಡುತ್ತ ಇತ್ತ್. ಪಾಪ ಆ ಕೊತ್ತಿ ಮರಿಗೆ ಯಾವ ಗ್ರಹಚಾರ ಕಾದಿತ್ತೇನೊ. ಅಷ್ಟಿಗೆ ಅತ್ತೆ ಮೇಲೆ ಇರುವ ಸಿಟ್ಟುಂದ ಒಳಗೆ ಇದ್ದ ಸೌದೆ ಕೊಳ್ಳಿನ್ನ ತಕ್ಕಂಡು ಕೊತ್ತಿ ಮರಿನ ಬಡ್ದು ಕೊಂದು ಹಾಕಿದೆ.

ಪಾಪ ಸೊಸೆಗೆ ಅತ್ತೆ ಮೇಲೆ ಬಂದ ಸಿಟ್ಟನ್ನ ಕೊತ್ತಿ ಮರಿ ಮೇಲೆ ತೀರಿಸಿತ್ತು.

● **ಕಲ್ಲುಮುಟ್ಲು ರೇಖ ಚನ್ನಬಸಪ್ಪ**
ಮರಗೋಡು.

ಒಡ್ಸು ಕಥೆ

ಆ ಕಡೆ ಈ ಕಡೆ ವಾಟೆಪಡ
ಮದ್ಯಲಿ ಕೂಗಲೆ ಪಡ
ಮಳೆರಾಯಂಗೆ ಇಂವ ಹೆದರ್‌ದುಲೆಗಡ
ಇವನಿಲ್ಲದೆ ಮಳೆಗಾಲ ಕಳೆದುಲೆಗಡ
ಈ ಮಹಾಸೂರ ಯಾರ್ ?

ಉತ್ತರ : ಗೊರ್ಗು

● **ಊರೋಳನ ಚಂದ್ರಕಲಾ ಪಾಪಯ್ಯ**, ಅಮಂದೂರು

ಚೋಟು ಮತ್ತೆ ಮೋಟೆನ ರೊಟ್ಟೆ ಕಥೆ

ನನ್ನ ಊರ್‌ಲಿ ಒಬ್ಬ ಚೋಟು ತೇಳಂವ ಇತ್ತ್. ಅವನ ಹೆಣ್ಣ್‌ನ ಹೆಸರ್ ಮೋಟೆತ. ನಾಟಿ ಕೆಲಸ ಸಮಯಲಿ ಒಂದು ದಿನ ಚೋಟು ಮಾಮೂಲಿನಂಗೆ ಎದ್ದ್ ಎತ್ತ್ ಕಟ್ಟಕೆ ಹಟ್ಟಿಗೆ ಹೋತು. ಎತ್ತ್‌ಗಳ ನೋಡ್‌ಕಾಕನ ಚೋಮಣ ಎತ್ತ್ ಇಲ್ಲೆ. ಅದ್ ರಾತ್ರಿ ಹಟ್ಟಿಗೆ ಬರದೆ ಕಾಡ್‌ಲಿ ಅಡಂಗಿ ಬುಟ್ಟುಟ್ಟು. ಮೋಟು ಹುಡುಕಿ ಹುಡುಕಿ ಕೂಪು ಕಾಡ್ ವೂಳಗೆ ಎತ್ತ್ ಸಿಕ್ಕಿತ್. ಅದರ ಹೊಡ್‌ಕಂಡ್

ಕೋಳಿಮಾಡು

ಡಿ. ಅಶೋಕ್‌ಕುಮಾರ್, ಮೈಸೂರು

ಬಾಕಾಕನ ಗಂಟೆ ಎಂಟ್ ಆಗಿ ಬುಟ್ಟುತ್. ಇನ್ನ್ ಎಂಥ ಮಾಡುದು ಮನೆಗೆ ಪೋಯಿ ಇಂದ್ ಹೂಡುದು ಸಾಯಲಿ ಮನೆಗೆ ಹೋಗಿ ಎತ್ತಿಕಾಕನ ಮೋಟೆ ಒಳ್ಳ ಗುಂಡ್ ಕಲ್ಲ್‌ನಂಗೆ ನಿತ್ತುಟು. ಮೊಕ ನೋಡಿರೆ ಒಳ್ಳ ಕೆಂಬಡೆ ಕಾಯಿನಂಗೆ ಉಟ್ಟು. ಎಂಥಕ್ಕನೆ ಅಮ್ಮಿ ಇಲ್ಲಿ ಹಿಂಗೆ ನಿತ್ತೊಳ, ಉಷಾರ್ ಇಲ್ಲೆಯ. ನೆಟ್ಟಂಗೆ ಅಡಿಗೆ ಮನೆಗೆ ಹೋತು. ಅಲ್ಲಿ ಹೋಗಿ ಕೇಳಿರೆ, ಅಕ್ಕಿ ಹೊಡಿ ತೀರಿ ಹೋವುಟು. ಇನ್ನ್ ಸ್ವಲ್ಪ ಉಟ್ಟು ಅಷ್ಟೆ ಅಂತ ಹೇಳ್‌ತ್. ಸರಿ ನೆನ್ನೆದ್ ತಂಗಳ್ ಅನ್ನ ಉಟ್ಟಲ ರೊಟ್ಟೆ ಮಾಡ್ ಇದ್ದಷ್ಟ ತಿಂಬೋನೊ ಅಂತ ಚೋಟು ಹೇಳ್‌ತ್. ಮೋಟೆ ಬಂದ ಕಲಿಸಿ ಉಂಡೆ ಕಟ್ಟ ಆಕನ ಮೂರೆ ಉಂಡೆ ಇರುದು. ಮೂರೆ ರೊಟ್ಟೆ ಆದು. ರೊಟ್ಟೆಯು ಆತ್. ಚೋಟು ಹೇಳ್‌ತ್, ನಂಗೆ ಎರಡ್ ರೊಟ್ಟೆ, ನಿಂಗೆ ಒಂದು ರೊಟ್ಟೆ ಆತ್‌ತ ಹೇಳಿ. ಇಬ್ಬರಿಗೂ ಜಗಳ ಹತ್ತಿಕಂಡತ್. ಏನೇನು ಮಾಡಿರು ಇಬ್ಬರೂ ಒಪ್ಪಿಕೊಂಬುದುಲೆ. ಚೋಟು ಹೇಳುದು ನಾನ್ ಬೆಳಿಗೆ ಎದ್ದ್ ಕಾಡೆಲ್ಲಾ ಉಂಬುಳು ಕಚ್ಚಿಸಿಕಂಡ್ ಎತ್ತ್‌ನ ಹೊಡಕಂಡ್ ಬಾತ್‌ಲೆ. ಅದಕ್ಕೆ ನಂಗೆ ಮೂರು ರೊಟ್ಟೆ. ಮೋಟೆ ಹೇಳಿಕೆ ನಾನ್ ರಾತ್ರಿ ಹೊಟ್ಟೆ ಬೇನೆ ಆಗಿ ಊಟನೆ ಮಾಡ್‌ತಲೆ ನಂಗೆ ಮೂರು ರೊಟ್ಟೆ ಬೇಕ್‌ತಾ. ಇಪಂದ್ ತೀರುವಲೆ. ಚೋಟು ಒಂದು ಉಪಾಯ, ಮಾಡ್‌ತ್ ಚಟ್ಟೆ ಮಾಪಳೆನ ಅಂಗಡಿಗೆ ಹೋಗಿ ಇಂದ್‌ಗಿರುದು ಕಾಲ್ ಕೆ. ಜಿ. ಅಕ್ಕಿ ಹೊಡಿ ತರನೊ ತ್ತೇಳಿ ಹೊರಟತ್ ಜೋಬಿಗೆ ಕೈ ಹಾಕಿರೆ ಎರಡೇ ರೂಪಾಯಿ ಇರುದು. ಇದಕ್ಕೆ ಅಕ್ಕಿ ಹೊಡಿ ಸಿಕ್ಕುದುಲೆ ತೇಳಿ ಒಂದು ಉಪಾಯ ಮಾಡತ್ 2ಸಣ್ಣ ಅಕ್ಕಿ ಹೊಡಿ ಬ್ಯಾಗ್‌ನ ಸ್ವಲ್ಪ ಸೆಂಡಿ ಮಾಡಿಕಂಡ್ ಹೊರಟತ್. ಮೊದಲು ಅವುಲ ಮಾಪಳೆನ ಅಂಗಡಿಗೆ ಹೋತು, ಹೋಗಿ ಅವುಲ ಕಾಲ್ ಕೆ. ಜಿ ಅಕ್ಕಿ ಹೊಡಿ ಕೊಡುತ್ತ ಅವ ಆಗ ತೂಕ ಮಾಡಿ ಬ್ಯಾಗಿಗೆ ಹೊಡಿ ಸೊರಗಿತ್. ಜೋಬ್‌ಲಿ ಇದ್ದ ಎರಡ್ ರೂಪಾಯಿನ ಕೊಟ್ಟತ್. ನಿಂಗೆ ಸೊಯ ಉಟ್ಟ ಎರಡ್ ರೂಪಾಯಿಗೆ ಅಕ್ಕಿ ಹೊಡಿ ಬಾದುಲೆ 5ರೂ ಕೇಳ್ತ್ ಅಂದರೆ ನಿನ್ನ ಅಕ್ಕಿ ಹೋಡಿನಾ ವಾಪಾಸ್ ತಕತ ಹೇಳಿಕೊಟ್ಟು ಬುಡತ್. ಅದರ ತಕಂಡವ ಸರಿಯಾಗಿ ಬ್ಯಾಗ್‌ನ ಕೊಡಕಿತಲೆ. ಬ್ಯಾಗ್‌ಲಿ ಒಂದು 50 ಗ್ರಾಂ ಅಂಟಿಕಂಡಿತ್ತ್. ಪುನಃ ಚಟ್ಟೆ ಮಾಪಳೆನ ಅಂಗಡಿಗೆ ಹೋತು ಅಲ್ಲಿ ಹಿಂಗೆನೆ ಮಾಡ್‌ತ್ ಅಲ್ಲೂ 50 ಗ್ರಾಂ ಹೊಡಿ ಸಿಕ್ಕಿತ್. ಎರಡ್ ರೂಪಾಯಿನು ಉಳತ್ ಆ ಎರಡ್ ರೂಪಾಯಿಗೆ ಒಂದು ಕಟ್ಟ್ ಬೀಡಿ ತಕ್ಕಂಡ್ ಎಳಿಕಂಡ್ ಬಾತ್. ಮನೆಗೆ ಬಂದಂವ ಎರಡ್ ಬ್ಯಾಗ್‌ನ ಮೋಟೆನ ಕೈಯಲಿ ಕೊಟ್ಟ್ ಇದರ್ನ ಲಾಯಕ್ಕ್‌ಲಿ ಕೊಡ್‌ಕ್‌ತ ಹೇಳತ್. 100 ಗ್ರಾಂ ಹೊಡಿ ಸಿಕ್ಕಿತ್ ಇಬ್ಬರಿಗೂ ಹೊಟ್ಟೆ ಹಸ್ತ್ ಕಣ್ಣ್ ಕಾಂಬದುಲೆ.

ಇಬ್ಬರೂ ಸೇರಿ ರೊಟ್ಟೆ ಮಾಡಿಕೆ ಸುರು ಮಾಡುದೊ. ಅದ್‌ಕ್ಕೆ ನೆನ್ನೆದ್ ಅನ್ನ ಸ್ವಲ್ಪ ಕಮ್ಮಿ ಆಗೊತು ಹೆಂಗೆಲ್ಲೊ ಮಾಡಿ ರೊಟ್ಟೆ ಮಾಡುದೊ. ಅಲ್ಲಿ ಆದರೆ ಬರೀ (5) ಐದೇ ರೊಟ್ಟೆ. ಇನ್ನು ಎಂತ ಮಾಡುದು ಚೋಟು ಮೆಲ್ಲೆ ಸುರು ಮಾಡತ್ ಅಮ್ಮಿ ಅಮ್ಮಿ ತೇಳಿಕಂಡ್ ಮೋಟೆನ ಪೂಸಿ ಮಾಡಿಕೆ. ಅವುಳು ಬುಡುದಾ ಜಗಳಕ್ಕೆ ಎದ್ದ್ ಬುಟ್ಟತ್ತ್ ಚೋಟುಗೆ ಒಂದು ಕಡೆಂದ ಹೊಟ್ಟೆ ಹಸ್ತುಟು. ಈ ಕಡೆಂದ ಸಿಟ್ಟ್. ನಿನ್ನ ಬಾಯಿಗೆ ಮಣ್ಣ್ ಹಾಕ ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲ, ಅಡಿಗೆ ಮಾಡಿಕಂಡ್ ತಿಂಬದು ನಿಗರ್‌ಕಂಡ್, ಬಿದ್ದ್‌ಕಂಡ್ ನಿದ್ರೆ ಮಾಡುದು ಇದೆ ಆಗೊತ್ತು. ನಿಂದ್ ತೇಳಿಕಂಡ್ ಗದ್ದೆ ನೋಡಿಕೆ ಹೋತು. ಸ್ವಲ್ಪ ಹೊತ್ತು ಆದ ಮೇಲೆ ಬಾತ್ ಬಂದ್ ಆಕನ ಇಬ್ಬರು ರಾಜಿ ಆದೊ. ರೊಟ್ಟೆ ಹಂಗೆ ಉಟ್ಟು ಇಬ್ಬರು ಕೂಡಿಕಂಡ್ ಒಂದು ಉಪಾಯ ಮಾಡ್ದೊ. ಏನ್ ತೇಳಿರೆ, ನಾವಿಬ್ಬರು ಮನೆಯೊಳಗೆ ಬಾಗಲ್ ಹಾಕಂಡ್ ಕೂರುದು ಯಾರ್ ಮೊದಲ್ ಮಾತಾಡುವೆ ಅವು ಸೋತಂಗೆ, ಅವುಕೆ ಎರಡೆ ರೊಟ್ಟೆ, ಗೆದ್ದವುಕೆ ಮೂರು ರೊಟ್ಟೆ. ಸರಿ ಚೋಟು ಎನ್ ಮಾಡತ್ ಎದರ್‌ಗಡೆ ಬಾಗಲ್ ಹಾಕಿತ್ ಮೋಟೆ ಹಿಂದ್‌ಗಡೆ ಬಾಗಿಲ್ ಹಾಕಿತ್ತ್. ಬೆಳಿಗ್ಗೆ ಹನ್ನೊಂದು ಗಂಟೆ ಆವುಟು. ಇಬ್ಬರು ಕುದ್ದೊ ಕುದ್ದ್ ಮಾರನೇ ಬೆಳಿಗ್ಗೆ ಆಗೊತ್ತು ಅಷ್ಟೊತ್ತಿಗೆ ಮೇಲೆ ಮನೆ ಸಂಣಪ್ಪ ಈ ಮಕ್ಕ ಎಲ್ಲಿಗೆ ಹೋದೊ ತೇಳಿಕಂಡ್ ನೋಡಿಕೆ ಬಾತ್ ಬಂದ್ ನೋಡಿರೆ ಬಾಗಲ್ ಹಾಕಂಡ್ ಉಟ್ಟು. ಹೆದರಿಕೆ ಆಗೊತ್ತು. ಸಂಣಪ್ಪ ಎನ್ ಮಾಡ್‌ತ್ ನಡುಮನೆ ಬೋಜಪ್ಪ

[20 ನೇ ಪುಟದ 3ನೇ ಕಾಲಂ ನೋಡಿ]

ತಾ ಬೆ ದಾ ರಿ ಕೆ

ಮಾಣಿಕ ಎತ್ತ್‌ನ ಬಲಕ್ಕೆ ಕಟ್ಟಿ
ಕರ್ಯಣ ಎತ್ತ್‌ನ ಎಡಕ್ಕೆ ಕಟ್ಟಿ ।
ಕೈಲಿ ನೆಕ್ಕಿ ಕೋಲ್ ಹಿಡ್ದ್
ಹರಹರ ಹೂಡುದು ಭೂಮಿಗಾರಿಕೆ ॥

ಅಪ್ಪನು, ಮಂಜ್ಜನು ಹೂಡುದು ನೋಡು
ಅವ್ವ ಬುತ್ತಿ ತಾದು ನೋಡು ।
ಹುಲ್ಲುಕಂತೆ ಹೊತ್ತ್‌ಕಂಡ್ ಬಾದು
ಅವ್ವಂಗೆ ಇರುವ ಜವಾಬುದಾರಿಕೆ ॥

ಹಸ್‌ನೆಕ್ಕಿ ಪೊಜ್ಜಿ ಪೊಕ್ಕಳ ರೊಟ್ಟಿ
ಚೊಂಬಲಿ ತುಂಬ ಬಿಸಿಬಿಸಿ ಕಾಫಿ ।
ಗದ್ದೆ ಪುಣಿಲಿ ಕುದ್ದ್‌ಕಂಡ್ ತಿಂಬೊದು
ನಮ್‌ಗೆಲ್ಲ ಇರುವ ಪಾಲ್‌ದಾರಿಕೆ ॥

ನಾಟಿ ಆದಂಗೆ ಕೈಲ್‌ಪೊದು ಹಬ್ಬ
ಕೊಯಿಲ್ ಕೆಲಸ ಆದಂಗೆ ಕಿಡ್ಡಾಸ ಹಬ್ಬ ।
ತೋಡಿಗೆ ಮದ್ದ್ ಹಾಕುದು ಮರ್‌ಲ್
ಕಾರೆಕಾಯಿ ಗುದ್ದುದು ನೋಡಿಕೆ ಪೊರ್ಲು.

ದೇವುರು ಮಾಡ್ದ್ ಹಳ್ಳಿಲಿ ಉಟ್ಟು
ಮನುಷ್ಯರ್ ಮಾಡ್ದ್ ಪೇಟೆಲಿ ಉಟ್ಟು ।
ದೇವರ ಸೃಷ್ಟಿಗೆ ಮೇಲಾದ್ ಉಟ್ಟೊ ?
ಹಳ್ಳಿಗೆ ಮೇಲಾದ ಜೀವನ ಉಟ್ಟೊ ? ॥

ಪೇಟೆಲಿ ಇರುದು ನಾಟಕ ರಂಗ,
ಹೊಟ್ಟೆಪಾಡಿಗೆ ಅದೆಷ್ಟೋ ಭಂಗ ।
ಕಟ್ಟ್‌ಹೊತ್ತ್ ತಂದರೆ ನಾವು
ಪಟ್ಟೆದಾರಿಕೆ ಮಾಡಿಕೆ ನೀವು ॥

ಕೌರವನಂಗೆ ಯುದ್ಧಕೆ ಬಂದ್
ಇಲ್ಲದ ಸಲ್ಲದ ಕೇಡ್‌ನ ತಂದ್
ಊರುನ ದೇಶನ ಹಾಳ್ ಮಾಡ್ತು
ಮನುಷ್ಯನ ಅಂತ್ಯಕ್ಕೆ ಇರುವ ಕೇಡ್‌ಗಾರಿಕೆ ॥

● **ಕೂಡಕಂಡಿ ಪೊನ್ನಪ್ಪ**, ವಕೀಲರು, ಮಡಿಕೇರಿ.

"ಗೂಡೆ ನೋಡ್ದು"

ಗೌಡ ಜನಾಂಗದ ಮೊದುವೆ ಕ್ರಮನ
ಅರೆ ಭಾಷೆಲಿ ಪದ್ಯನ ಬರಿಯೊಕುಂತ ।
ಯಾರ್ಯಾರೋ ನಂಗೆ ಒತ್ತಾಯ ಮಾಡ್ದೊ
ಬರ್ದ ಬುಡೋನೊ ನೋಡೂವಂತೇಳಿ ॥

ಸಂಗತಿ ನಮ್ಮದೆ, ಭಾಷೆಲಿ ಬರೆಕ್ಕೊದರೆ
ಬಾರಿನೆ ಉಟ್ಟು ಕಷ್ಟಾಂತ
ಇನ್ನೊಂದು ಕಡೆ ತೊಪುನು ಇದ್ದರೆ
ಹೇವ್‌ರಿಕೆ ನಂಗಾದೆ ಬೊಯ್ದುವೆಂತ ॥

ಹೆಂಗೂ ಇರ್‍ಲೀತ ಸುರು ಮಾಡಿ ಆತ್
ನಮ್ಮದೇ ಭಾಷೆನ ಬುಡಿಕೆಲೆಂತ ।
ಮೊದುವೆನ ಕ್ರಮು ಇದ್ ತೊಪ್ಪಾಗಿದ್ದರು
ಬ್ಯೊ ಬ್ಯಾಡಿ ನೀವೆಲ್ಲಾ ನಂಗೆಂತ ॥

ಪ್ರಾಯಕೆ ಬಾಕನ ಗೂಡೆಗು ಹೈದಂಗು
ಮೊದುವೆನ ಮಾಡುವ ಕ್ರಮು ಉಟ್ಟು ।
ಹಿರಿಯರ ಜತೆಗೆ ಗಂಡುನೂ ಹೋಗಿ
ಗೂಡನ ಹುಡುಕುವೆ ಎಲ್ಯುಟುತಾ ॥

ಗೂಡೆನ ನೋಡ್‌ದ, ಹೈದನ ಕೇಳಿವೆ
ನೋಡ್‌ದ ಗೂಡೆ ಹೇಂಗುಟ್ಟ್ ।
ಗೂಡೆಗು ಕೇಳಿವೆ ಗಂಡನು ಇವನೆ
ಒಪ್ಪಿಯಂತಾವರೆ ಸೂಂ ಕುಟ್ಟು ॥

ಗೂಡೆಗೆ ಹೇಳಿಕೆ ನಾಚಿಕೆ ಆದರೆ
ಹೇಳಿಕೆ ಒಂದದ್ ಕಿಣಿ ಉಟ್ಟು ।
ಹಸಿ ಎಲೆ ಅಡ್ಕೆನ ತಿಂಬಕೆ ಕೊಟ್ಟವೆ
ಉಪಾಯ ನೋಡಿದ್ ಹೇಂಗುಟ್ಟ್ ॥

ಹಸಿ ಎಲೆ ಅಡ್ಕೆನ ತಿಂದರೆ ಅರ್ಥ
ಗೂಡೆಗೂ ಕೂಡಾ ಮನ್ಸುಟ್ಟು ।
ಇಲ್ಲೆಂತಾವರೆ ಬಂದವುಕ್ಕೆಲ್ಲ
ಬಾಯಿ ಬುಟ್ಟ್ ಹೇಳ್ಕುಂತೇನುಟ್ಟು ॥

● **ಕಡ್ಲೇರ ಶಿವಕುಮಾರ್**, ಬೆಟ್ಟಗೇರಿ

ಚಾಂಪನ ಬೋರನು ಮತ್ತೆ ಪಿಳ್ಳಿನು

ನಾನ್ ಏಳ್ ಎಂಟ್ ವರ್ಷವನಿರ್ ಕಾಕನ ನಮ್ಮ ಚಾಂಪ ಕಾವೇರಿ ಜಾತ್ರೆಗೆ ಭಾಗಮಂಡಲಕ್ಕೆ ಹೋಗಿತ್ತ್. ಆಗ ನಮ್ಮ ಅಪ್ಪನ ಅಪ್ಪ, ನಂಗಾರ್ ಕಾವೇರಿ ಯಮ್ಮ ಅಜ್ಜನ ಕಾಂಬಕೆ ಸಿಕ್ಕಿತ್, ಅವು ಚಾಂಪನ ಮನೆಗೆ ಕರ್‌ಕಂಡ್ ಹೋದೊ. ಆಗ ಚಾಂಪಗೆ ಅವರ ಮನೇಲಿದ್ದ ನಾಯಿ ಮರಿನ ಕಂಡ್ ಕುಷಿ ಆತ್. ಪೊರ್ಲ್ಲಾದ ಮರಿ. ಮಾರ್ನೆ ದಿನ ಚಾಂಪ ನಾಯಿ ಮರಿನ ಯಾರಿಗೂ ಗೊತ್ತಿಲ್ಲದೆ ಹಾರಿಸಿ ಕಂಡ್ ರಾಮು ಬಸ್‌ಹತ್ತಿ ಸೀದಾ ಮೂರ್ನಾಡಿಗೆ ಬಾತ್.

ನಾಯಿ ಮರಿನ ಮನೆಗೆ ತಂದ್ ಆಕನ ನಾನ್ ಕೇಳ್‌ದೆ. ಚಾಂಪ ನಾಯಿಮರಿಗೆ ಹೆಸ್‌ರ್ ಎಂತ ಹಾಕುದುತಾ. ಆಗ ನಮ್ಮ ಕೆಲ್ಸಕ್ಕೆ ಬೋರಾತ ಒಬ್ಬ ಇತ್ತ್, ಅವನ ಬೋರಾ ಬೋರಾತ ಕರೆಯಕನ ಈ ನಾಯಿಮರಿ ಬಾಲ ಆಡಿಸಿಕಂಡ್ ಬಾತಿತ್ತ್. ಸ್ವಲ್ಪ ದಿನ ಕಳ್‌ದ ಮ್ಯಾಲೆ ಬೋರಾ ಬ್ಯಾರೆ ಕಡೆ ಹೋತು. ಅವನ ಹೆಸ್‌ರ್‌ನೇ ಹಾಕಿ ಬೋರಾ ಬೋರಾತಾ. ಕರಿಯಕೆ ಸುರುಮಾಡುದೋ.

ಹಿಂಗೆ ಇರ್‌ಕನ ಬೈಲೆ ಕಾಳಪ್ಪ ಚಾಂಪ ಕಾಡ್‌ಹಂದಿ ಬೇಟೆಗೆ ನಾಯಿನ ಕರ್‌ಕಂಡ್ ಹೋನೆತ ಹೇಳ್‌ದೊ. ಚಾಂಪಂಗೆ ಒಂದ್ ಪಾಲ್ ಸಿಕ್ಕಿದೇತ ಹೇಳಿ ಕಳ್‌ಸ್‌ತಾ ಇದ್ದೊ. ಚಾಂಪ ಬೇಟೆಗೆ ಹೋದು ನಿಲ್ಸಿತ್. ನಮ್ಮ ನಾಯಿ ಹಸಿ ರಕ್ತದ ರುಚಿಗೆ ಬೇಟೆ ಬುಟ್ಟೆತ್ತ್‌ಲೆ. ಮೊಲ, ಕುಂಡತ, ಕೀರಿ ಹಿಡ್‌ಕಂಡ್ ಬಾತಿತ್ತ್, ಒಂದ್ ದಿನ ಕಾಡ್ ಕೋಳಿನೇ ಹಿಡ್ ಕಂಡ್ ಬಾತ್. ಅಲ್ಲಿಂದ ಕಾಡಿಗೆ ಬುಟ್ಟ ನಾಯಿ ಮನೆವರ್ದ್, ಊರವರ್ದ್ ಕೋಳಿ ಹಿಡಿಯಕೆ ಸುರುಮಾಡ್‌ತ್. ಅದ್ ಹಿಡಿಯುದು ತೇಳಿರೆ ಎಂತದ್ ಗೊತ್ತುಟಾ! ದೊಡ್ಡ ದೊಡ್ಡ ಹುಂಜಗಳ, ಮೊಟ್ಟೆ ಹೇಂಟೆಗಳ. ಬೋರಾ ಹಿಡ್‌ಕಂಡ್ ಬಂದ್ ಚಾಂಪನ ಕಾಲ್‌ಹತ್ರ ಮಡ್‌ಗ್‌ತ್ತಿತ್ತ್. ಚಾಂಪ ಹೇಳಿಕಳ್‌ಸ್ತಿತ್ತ್, ಯಾರ್‌ದ್‌ನೇ ಮಕ್ಕಳೇ, ಕೋಳಿ!! ಬೈಲೆ ಮಕ್ಕ, ತೆಕ್ಕಡೆಮಕ್ಕ ಓಡಿ ಬಂದ್ ನಮ್ಮದ್ ನಮ್ಮದ್‌ಂತೇಳ್‌ತ್ತಿದ್ದೋ. ಆಗ ಚಾಂಪ ಹೇಳ್‌ತಿತ್ತ್, ನಾಯಿ ಕಚ್ಚಿದ ಕೋಳಿ ತಿಂದರೆ ಹುಚ್ಚಿ ಹಿಡ್‌ವದೆ ಮಕ್ಕಳೇಂತ ಹೇಳ್‌ತ್ತಿತ್ತ್. ಅದ್‌ಕೆ ಆ ಮಕ್ಕ ಕೋಳಿನ ಅಲ್ಲೇ ಬುಟ್ಟ್ ಹೋತಿದ್ದೊ. ಹೋದ ಮ್ಯಾಲೆ ಅಜ್ಜನುಪಿಳ್ಳಿನು ಸೇರಿಕಂಡ್ ಅಚ್ ಕಟ್‌ಮಾಡಿ, ತಿಂದ್ ತೇಗುದು ನೋಡಕ್ಕು. ಚಾಂಪಂದ್ ಉದ್ದ ಮೀಸೆ, ಚಿಪ್ಪಿಲಿ ಬೈನೆ ಕಳ್ಳ್ ಕುಡ್‌ಕಂಡ್ ಇರ್‌ಕನ ಚಾಂಪನ ಮೀಸೆಗೆಲ್ಲಾ ಅಂಟಿಕ್ಕಂಬತ್ತಿತ್ತ್ ಕಳ್ಳ್‌ನ ನೊರೆ. ಚಾಂಪಂಗೂ ಪಿಳ್ಳಿಗೂ ಖುಷಿಯೋ ಖುಷಿ. ಕಾರಣ ನಾನ್ ಚಾಂಪನ ಹೊಟ್ಟೆನ ಪೂಜುದು, ಚಾಂಪ ಗಡಾರ್ ತೇಳಿ ತೇಗುದು. ಸ್ವಲ್ಪ ದಿನ ಕಳ್‌ದ ಮ್ಯಾಲೆ ಬೋರಂಗೆ ಆಗದವು ಯಾರೋ ಮದ್ದ್ ಹಾಕಿ ಕೊಂದ್‌ಬುಟ್ಟೊ. ಈಗ ನಂಗೆ ಬೋರನ್ನ ಮತ್ತೆ ಚಾಂಪನ ಗ್ಯಾನ ಆದೆ. ಯಾಗ ಎಂದರೆ 2 ಪೆಗ್ ಏರಿಸಿದ ಮ್ಯಾಲೆ. ಕೊಡಗು ಸಂಗಾತಿ ಓದವು ನಿಮ್ಮಲ್ಲಿ ಇಂಥ ಬುದ್ಧಿವಂತ ನಾಯಿಗ ಇದ್ದರೆ ನಂಗೆ ಹೇಳೊಕು. ಅಂದರೆ ನಾನ್ ಕೋಳಿ ಹಿಡಿಯಕೆ ಮಾತ್ರ ಕಲ್ಸಿಕಿಲ್ಲೆ, ಯಾಕೆ ತೇಳ್‌ರೆ ಈಗ ನಾಯಿಗೂ ಮನ್‌ಷ್ಯಂಗೂ ಸೇರ್ನ್ಸಿ ಗುಂಡು ಹೊಡವೋ. ಕಾಡ್‌ಜಾತಿ ಹಿಡಿಯಕೆ ಮಾತ್ರ ಕಲ್ಸಿನೆ, ಆತಾ.

ನೇರ್‌ಕಜೆ ವಿಶ್ವನಾಥ (ರಾಜ)
ಮೈಸೂರು

ಗೂಡೇ

ಬಾನೇ ಗೂಡೇ ನನ್ನ ಹಿಂದೆ
ನಂಗೆ ನಿಂಗೆ ಜೋಡಿಟ್ಟ್ಟ
ಅಪ್ಪ ಅವ್ವ ಒಪ್ಪಿಟ್ಟ್ಟ ॥ ಟು ॥

ಏಲಕ್ಕಿ ತೋಟಲಿ ಹೂವುಟ್ಟ್ಟ
ಕಾಫಿ ತೋಟಲಿ ಕಾಫಿಟ್ಟ್ಟ
ನಂಗೆ ನಿಂಗೆ ಜೋಡಿಟ್ಟ್ಟ ॥ ಟು ॥

ನಂಗೆ ಪಿಯಟ್ ಕಾರುಟ್ಟ್ಟ
ನಿಂಗೆ ಬುಲೆಟ್ ಬೈಕ್‌ಟ್ಟ್ಟ
ಪಿಯಟ್ ಕಾರ್‌ಲಿ ನೀವುಟ್ಟ್ಟ ॥ ಟು ॥

ಬುಲೆಟ್ ಬೈಕ್‌ಲಿ ಸೀಟುಟ್ಟ್ಟ
ಬಾನೇ ಗೂಡೇ ನನ್ನ ಹಿಂದೆ
ನಂಗೆ ನಿಂಗೆ ಜೋಡಿಟ್ಟ್ಟ ॥ ಟು ॥


● **ಮೊಟ್ಟೇರ ಹೇಮ ಬಾಲಕೃಷ್ಣ**
ಮಡಿಕೇರಿ

[18ನೇ ಪುಟದಿಂದ]

ಚಾಮಿಯಪ್ಪನ ಕರ್ತ್. ಎಲ್ಲಾ ಬಂದ್ ಕರ್ದರೂ ಸದ್ದೇ ಇಲ್ಲೆ. ಇವುಕೆ ಒಳಗೆ ಕೇಳಸುತ್ತಾ ಉಟ್ಟ್ಟ. ಓಂಕಂಡರೆ ಸೋತು ಹೊದವೆ. ಒಂದು ರೊಟ್ಟೆ ಸಿಕ್ಕ್‌ಲೆ. ಅದಕ್ಕೆ ಸುಮ್ಮನೆ ಕುದ್ದೊ. ಹೊರಗೆ ಇದ್ದವುಕ್ಕೆ ಕರ್‌ದ್ ಕರದ್ ಸಾಕಾವುಟು. ಇನ್ನು ಎಂಥ ಮಾಡ್‌ದು ಕೆಳಗೆ ಮನೆ ಅಣ್ಣಯ್ಯ ಹೈದನ ಕರ್‌ದೊ. ಅಂವ ಬಂದ್ ಎಷ್ಟ್ಟ ಕರದರೂ ಎದ್ತ್‌ಲೆ. ಅಂವ ಎಂಥ ಮಾಡ್‌ತ್ ಒಂದು ಜಾಡ್‌ಸಿ ಒದ್ದತ್. ಬಾಗ್‌ಲ್ ಮುರ್‌ತ್. ಒಳಗೆಂದ ಜೋಟು ಯಾಂವನೆ ಅಂವ ಬೋಳಿ ಮಂಜ ತ್ತೇಳಿ ಎದ್ದ್ ಬಾತ್. ಅಂತು ಮೋಟನೆ ಗೆದ್ದತ್. ಅವುಳಿಗೆ ಮೂರು ರೊಟ್ಟೆ, ಜೋಟುಗೆ ಎರಡೇ ರೊಟ್ಟೆ.

ನೀವು ಎಲ್ಲಾರ್ ಹಂಗೆ ಮಾಡಿ ಬುಡ್ ಬಡಿ. ●

5th Death Anniversary



Sri Ketoli Aiyappa Somanna

Expired on 20-8-92

Rememberd with Love & Respect

-From wife, children and brothers

K.R.N.N. 240

Printed by M K Thammaiah and Published by Kodagu Sangathi on behalf of Pattada P. Sheelamani and Printed at ASHIRWAD PRINTERS, 180/A, 6th Main, Vinayakanagar, Mysore-12 Published at Mysore, Editor PATTADA. P. SHEELAMANI, 322, Bhogadi Circle, Hinkal Post, Mysore-570017 Phone : 516771